ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು

ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

80

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು

ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

KAUTILYANA ARTHASHASTRADALLI
RAJAKEEYA VICHARAGALU
by Dr. M. P. Bhuvaneswara Prasad
Published by Prasaranga, Bangalore University
Bangalore. Pp. 56+X 1996

ಪ್ರಕಾಶಕರು :

ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.

ಬೆಲೆ : ರೂ. 5–00

ಮುದ್ರಕರು :

ಎಸ್. ಎಂ. ಹೊನ್ನಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ
ಬೆಂಗಳೂರು–560 056.

ಮುನ್ನುಡಿ

ಜ್ಞಾನಕ್ಕಿಂತ ಮಿಗಿಲಾದದು ಜಗತ್ತಿನಲ್ಲಿ ಯಾವುದೂ ಇಲ್ಲ. ಜ್ಞಾನಪ್ರಸಾರಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವ ಕಾರ್ಯವೂ ಒಂದು. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಹಾಗೂ ವಿವಿಧ ವೇದಿಕೆಗಳಲ್ಲಿ ಇಂತಹ ಉಪನ್ಯಾಸಗಳನ್ನು ಹಲವಾರು ಸಂಘ, ಸಂಸ್ಥೆಗಳ, ಸಹಯೋಗ–ಸಹಕಾರದೊಡನೆ ಪ್ರಸಾರಾಂಗವು ನಡೆಸಿಕೊಂಡು ಬರುತ್ತಿದೆ. ಖ್ಯಾತ ವಿದ್ವಾಂಸರು, ಕಾಲೇಜಿನ ಪ್ರಾಧ್ಯಾಪಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸುತ್ತಿರುವ ಪರಿಣಿತರಿಂದ ಇಂತಹ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಜ್ಞಾನಜ್ಯೋತಿಯನ್ನು ಎಲ್ಲೆಡೆ ಪ್ರಸರಿಸುವ ಕೈಂಕರ್ಯವನ್ನು ಕೈಗೊಂಡಿರುವ ಪ್ರಸಾರಾಂಗದ ಶ್ರಮವು ಶ್ಲಾಘನೀಯ. ಇದಕ್ಕಾಗಿ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಎಸ್. ಕೆಂಡಗಣ್ಣಸ್ವಾಮಿ ಅವರನ್ನು ಅಭಿನಂದಿಸುತ್ತೇನೆ.

'ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು' ಎಂಬ ವಿಷಯದ ಬಗ್ಗೆ ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್ ಅವರು ಬಹಳ ಆಳವಾಗಿ ಅಭ್ಯಾಸ ಮಾಡಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾದ ಮಾಹಿತಿ

ಯನ್ನು ಅವರ ಉಪನ್ಯಾಸದಲ್ಲಿ ಕೊಟ್ಟಿದ್ದಾರೆ. ಇದು ನಾಡಿನ ಎಲ್ಲೆಡೆ ತಲುಪಲಿ ಎಂಬ ಉದ್ದೇಶದಿಂದ ಇದರ ಪ್ರಕಟಣೆ ಯನ್ನು ಕೈಗೊಳ್ಳಲಾಗಿದೆ. ಈ ಬಗ್ಗೆ ನನ್ನ ಅಭಿನಂದನೆಗಳು ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್ ಅವರಿಗೆ ಸಲ್ಲಬೇಕು. ಈ ಚಿಕ್ಕ ಪುಸ್ತಕವನ್ನು ಚೊಕ್ಕಟವಾಗಿ ಮುದ್ರಿಸಿಕೊಟ್ಟಿರುವ ವಿಶ್ವವಿದ್ಯಾಲಯ ಮುದ್ರಣಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್. ಎಂ. ಹೊನ್ನಪ್ಪ ಅವರಿಗೂ ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ನನ್ನ ಮೆಚ್ಚಿಗೆ ಸಲ್ಲಬೇಕು.

ಡಾ॥ ಎನ್. ಆರ್. ಶೆಟ್ಟಿ
ಕುಲಪತಿ

ಪ್ರಕಾಶಕರ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ವರ್ಷಗಳಿಂದ ಜ್ಞಾನ ದೀವಿಗೆಯನ್ನು ಹೊತ್ತಿಸಿ, ಅದನ್ನು ಎಲ್ಲೆಡೆ ಬೆಳಗಿಸುತ್ತಾ ಬಂದಿರುವುದು ಸರಿಯಷ್ಟೆ. ನಾಡಿನ ಎಲ್ಲರೂ ವಿಶ್ವವಿದ್ಯಾಲಯದ ಮೆಟ್ಟಿಲನ್ನು ಹತ್ತಲು ಸಾಧ್ಯವಿಲ್ಲದೇ ಇರಬಹುದು. ಅಂತಹ ಜನಸಾಮಾನ್ಯರಿಗೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಪರಿಚಯವಾಗಲಿ ಎಂಬ ದೃಷ್ಟಿಯಿಂದ ಪ್ರಸಾರಾಂಗವು ಉಪನ್ಯಾಸಗಳ ಕಾರ್ಯಕ್ರಮಗಳನ್ನು ಅನೇಕ ವೇದಿಕೆಗಳಲ್ಲಿ ವಿವಿಧ ಸಂಘ, ಸಂಸ್ಥೆಗಳ, ಸಹಯೋಗ–ಸಹಕಾರದೊಡನೆ ಏರ್ಪಡಿಸುತ್ತಾ ಬಂದಿದೆ. ಹಿರಿಯ ಪ್ರಾಧ್ಯಾಪಕರೂ, ವಿದ್ವಾಂಸರು ಹಾಗೂ ಸಾಹಿತಿಗಳಿಂದ ಇಂತಹ ಉಪನ್ಯಾಸಗಳನ್ನು ಏರ್ಪಡಿಸಿ, ಆ ಉಪನ್ಯಾಸಗಳನ್ನೊಳಗೊಂಡ ಲೇಖನಗಳನ್ನು ಕಿರು ಗ್ರಂಥರೂಪದಲ್ಲಿ ಪ್ರಕಟಿಸುತ್ತಾ ಬಂದಿದೆ. ಈ ರೀತಿ ಜ್ಞಾನಪ್ರಸಾರ ಮಾಡುವ ಕಾರ್ಯಗಳಲ್ಲಿ ಸುಲಭವಾದ ಬೆಲೆಗಳಲ್ಲಿ ಈ ಪುಸ್ತಕಗಳು ಮನೆ ಮನೆ ತಲುಪುವಂತೆ ಮಾಡುವುದು ಪ್ರಸಾರಾಂಗದ ಹೆಮ್ಮೆಯ ಕಾಣಿಕೆಯಾಗಿದೆ.

ಸ್ವಾಮಿ ವಿವೇಕಾನಂದರು ಹೇಳುವಂತೆ ಜನ ಸಾಮಾನ್ಯರು ದೇವಿ ಸರಸ್ವತಿಯ ಎಡೆಗೆ ಬಾರದೇ ಹೋದರೆ, ಸರಸ್ವತಿಯೇ ಜನರಿರುವೆಡೆಗೆ ಹೋಗಬೇಕಾಗುವುದು. ಪ್ರಸಾರಾಂಗವು ಈ ಕಿರುಹೊತ್ತಿಗೆಗಳ ರೂಪದಲ್ಲಿ ಎಲ್ಲ ಆಸಕ್ತರ ಮನೆಮನೆಗೆ ಸಾಗಿ

ಅವರು ಜ್ಞಾನಸಂಪತ್ತನ್ನು ಪಡೆಯಲು ಅವಕಾಶ ಮಾಡಿ ಕೊಟ್ಟಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಪ್ರಸಾರಾಂಗದ ಎಲ್ಲಾ ಕಾರ್ಯಕ್ರಮಗಳಿಗೆ ತುಂಬು ಹೃದಯದ ಪ್ರೋತ್ಸಾಹ ಕೊಡುತ್ತಿರುವ ಹಾಗೂ ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಕೊಟ್ಟಿರುವ ಮಾನ್ಯ ಕುಲಪತಿ ಡಾ॥ ಎನ್. ಆರ್. ಶೆಟ್ಟಿ ಅವರಿಗೆ ವಂದನೆಗಳು.

ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್ ಅವರು ಖ್ಯಾತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, 'ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರ'ವೆಂಬ ವಿಷಯದ ಮೇಲೆ ಪ್ರಸಾರಾಂಗದ ವತಿಯಿಂದ ತುಮಕೂರಿನ ಶ್ರೀ ಸಿದ್ಧಗಂಗಾ ಕಾಲೇಜಿನಲ್ಲಿ ತಮ್ಮ ಉಪನ್ಯಾಸವನ್ನು ನೀಡಿದ್ದರು. ಇದು ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದ ಅಧ್ಯಾಯವಾದ್ದರಿಂದ, ಅವರ ಲೇಖನಗಳನ್ನು ಪ್ರಸಾರಾಂಗವು ಪ್ರಕಟಿಸಿ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ನಾಡಿನ ಜನತೆಗೆ ತಲುಪುವಂತೆ ಮಾಡುತ್ತಿದೆ. ಡಾ॥ ಭುವನೇಶ್ವರ ಪ್ರಸಾದ್ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಕಿರು ಹೊತ್ತಿಗೆಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ವಿಶ್ವವಿದ್ಯಾಲಯದ ಮುದ್ರಣಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್. ಎಂ. ಹೊನ್ನಪ್ಪ ಅವರಿಗೂ ಧನ್ಯವಾದಗಳು.

ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ, ಪ್ರಸಾರಾಂಗ

ಲೇಖಕರ ಮಾತು

ವಿಶ್ವವಿದ್ಯಾಲಯ ಎಂದರೆ 'ಜ್ಞಾನ ದೇವಿಯ ದೇಗುಲ' (ಡಾ॥ ರಾಧಾಕೃಷ್ಣ) ಅಂದರೆ ಜಗತ್ತಿನ ಜೀವರಾಶಿಗಳ ಮನವನ್ನು ಪರಿಪಕ್ವಗೊಳಿಸಿ ತನ್ನನ್ನು ತಾನು ಅರಿಯುವಂತೆ ಮಾಡುವ ಒಂದು ಮಹತ್ತರವಾದ ಸಾಧನವಾಗಿದೆ. ಬದಲಾಗುತ್ತಿರುವ ಸಮಾಜದ ವ್ಯವಸ್ಥೆಗೆ ಸ್ಪಂದಿಸುವುದು, ಈ ದೇಗುಲ ಆರಂಭವಾದ ದಿನದಿಂದ ಇಲ್ಲಿಯವರೆಗೆ ಅನೇಕ ರೂಪಗಳಲ್ಲಿ ಜ್ಞಾನದ ಹೊಳೆಯನ್ನು ಹರಿಸುತ್ತಿರುವುದು ಸರ್ವವಿದಿತ.

ಜನವರಿ 1995ರಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗ ನನ್ನನ್ನು ಆಹ್ವಾನಿಸಿ 'ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು' ಎಂಬುದರ ಬಗ್ಗೆ ತುಮಕೂರು ಶ್ರೀ ಸಿದ್ಧಗಂಗಾ ಕಾಲೇಜಿನಲ್ಲಿ ಉಪನ್ಯಾಸ ಶಿಬಿರವನ್ನು ಏರ್ಪಡಿಸಿ, ಅಲ್ಲಿ ನಾನು ನೀಡಿದ ಪ್ರವಚನವನ್ನು ಹೊತ್ತಿಗೆಯ ರೂಪದಲ್ಲಿ ಹೊರ ತರುತ್ತಿರುವುದು ಸ್ವಾಗತಾರ್ಹವು ತುಂಬಾ ಉಪಯುಕ್ತವು ಆಗಿದೆ.

ಕೌಟಿಲ್ಯನ ಅರ್ಥಶಾಸ್ತ್ರ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನಲ್ಲೇ ಅಗ್ರಮಾನ್ಯ ಸ್ಥಾನ ಪಡೆದಿದೆ. ಈತನ ವಿಚಾರ ಧಾರೆ ಅಥವಾ ನೀತಿ ಇಂದಿನ ರಾಜ್ಯ ವ್ಯವಸ್ಥೆ, ಸರ್ಕಾರ, ಆಡಳಿತ, ವಿದೇಶಾಂಗ ವ್ಯವಹಾರ, ವಾಣಿಜ್ಯ, ವ್ಯಾಪಾರ, ವ್ಯವಹಾರ, ಕರನೀತಿ, ಅದಕ್ಕಿಂತ ಹೆಚ್ಚಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ನಾಗರಿಕ

ಕ್ಷೇತ್ರಗಳ ಮೇಲೆ ಇದರ ಪ್ರಭಾವ ಹೇಳತೀರದು. ಅದರಲ್ಲಿಯೂ ರಾಜಕೀಯ ವಿಚಾರವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾನೆ. ಲೌಕಿಕ, ಅಲೌಕಿಕದ ಬಗೆಗೆ ಇವನ ವರ್ಣನೆ ಮೆಚ್ಚುವಂತದ್ದು. ಭಾರತೀಯನಾದ ಪ್ರತಿಯೊಬ್ಬನು ಕೌಟಿಲ್ಯನನ್ನು ಅಧ್ಯಯನ ಮಾಡಲೇಬೇಕು. ಒಟ್ಟಾರೆ ಕೌಟಿಲ್ಯ ತನ್ನ ಚಾಣಕ್ಯತನವನ್ನು ಬಹು ಸೊಗಸಾಗಿ, ಪ್ರಸಕ್ತ ಸ್ಥಿತಿಗೆ ಅಳವಡಿಸಿಕೊಂಡು ಹೋಗು ವಂತೆ ಆ ದಿನವೇ ಗ್ರಂಥದ ಮೂಲಕ ಅಭಿವ್ಯಕ್ತಿಗೊಳಿಸಿ ಜನತೆಗೆ ಮಹದುಪಕಾರ ಮಾಡಿದ್ದಾನೆ. ಇದು ಬಿ.ಎ., ಎಂ.ಎ., ಎಲ್.ಎಲ್.ಬಿ., ಐ.ಎ.ಎಸ್., ಕೆ.ಎ.ಎಸ್. ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ ಉಪಯುಕ್ತವಾಗುವಂತಹ ವಿಚಾರ ದರ್ಪಣವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ನನ್ನನ್ನು ಗುರ್ತಿಸಿ, ಉಪನ್ಯಾಸ ನೀಡಲು ಅವಕಾಶ ಮಾಡಿಕೊಟ್ಟು ಪ್ರೋತ್ಸಾಹಿಸಿ, ಪ್ರೇರೇಪಿಸಿದ ನಿರ್ದೇಶಕರಾದ ಎಸ್. ಕೆಂಡಗಣ್ಣ ಸ್ವಾಮಿಯವರಿಗೆ ಋಣಿಯಾಗಿದ್ದೇನೆ. ಗ್ರಂಥದ ರೂಪದಲ್ಲಿ ಹೊರತಂದು ಇದು ಜನತೆಗೆ ತಲುಪುವಂತೆ ವ್ಯವಸ್ಥೆಗೊಳಿಸು ವಂತಹ ಅವಕಾಶ ಮಾಡಿಕೊಟ್ಟಿರುವ ಕುಲಪತಿ ಎನ್. ಆರ್. ಶೆಟ್ಟಿ ಅವರಿಗೆ ಮತ್ತು ಪರೋಕ್ಷವಾಗಿ ನೆರವು ನೀಡಿದ ಸಿಬ್ಬಂದಿ ವರ್ಗಕ್ಕೆ ನನ್ನ ಹೃದಯಪೂರ್ವಕ ವಂದನೆಗಳು. ಭವಿಷ್ಯದಲ್ಲಿಯೂ ಕೂಡ ವಿಶ್ವವಿದ್ಯಾಲಯ ಇಂತಹ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡು ನಾಡಿನ ಜನತೆಗೆ ಉಪಕಾರ ಮಾಡಲೆಂದು ಆಶಿಸುವೆ.

ಬೆಂಗಳೂರು ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು

ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್

ಪರಿಚಯ

ಸ್ಮೃತಿ, ಶೃತಿ, ನೀತಿಸಾರ, ಪುರಾಣಗಳು, ಉಪನಿಷದ್, ವೇದಗಳಲ್ಲಿಯೂ ರಾಜನೀತಿಯೂ ಒಂದು ವಿಶಿಷ್ಟ ಸ್ಥಾನ ಗಳಿಸಿದೆ. ಅವುಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವು ರಾಜನೀತಿಯ ಕುರಿತು ಮುಖ್ಯವಾದ ಗ್ರಂಥಗಳಲ್ಲಿ ಇದೊಂದೆನಿಸಿಕೊಂಡಿರುವುದು ಸತ್ಯ ಸಂಗತಿಯೂ ಸರ್ವವೇದ್ಯವೂ ಆಗಿದೆ. ಇದನ್ನು ನೀತಿಶಾಸ್ತ್ರ, ದಂಡನೀತಿ, ರಾಜನೀತಿ ಎಂಬೆಲ್ಲಾ ಹೆಸರುಗಳಿಂದ ಗುರ್ತಿಸಿ ದೀರ್ಘಕಾಲದಿಂದ ಬೆಳೆದು ಬಂದ ಪ್ರಾಚೀನ ಶಾಸ್ತ್ರವಾಗಿದೆ. ಇದು ಭಾರತೀಯ ಆಧ್ಯಾತ್ಮ ಜೀವನಕ್ಕೆ ವ್ಯತಿರಿಕ್ತವಾದ ಲೌಕಿಕ ಜೀವನವನ್ನು ಕುರಿತ ಸವಿಸ್ತಾರವಾದ ಜ್ಞಾನವನ್ನು ಒದಗಿಸುವಂತಹ ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕಿಂತ ಹೆಚ್ಚಾಗಿ ಹಾಗೂ ಸ್ಪಷ್ಟವಾಗಿ ಮತ್ತು ಸಮರ್ಪಕವಾಗಿ ವಿಚಾರ ಮಾಡಿರುವ ಒಂದು ಬೃಹದ್ಗ್ರಂಥವಾಗಿದೆ. ಈ ಅರ್ಥಶಾಸ್ತ್ರದಲ್ಲಿ ರಾಜನೀತಿಗೆ ಪ್ರಮುಖ ಸ್ಥಾನ ನೀಡಿ ಅದರ ಬಗೆಗೆ ತನ್ನದೇ ಆದ ಶೈಲಿಯಲ್ಲಿ ರಾಜಧರ್ಮ ಅಥವಾ ರಾಜನೀತಿಯನ್ನು ಕೌಟಿಲ್ಯನು ವಿವರಿಸಿದ್ದಾನೆ. ಅಂದರೆ ಮುಖ್ಯವಾಗಿ ಅರ್ಥಶಾಸ್ತ್ರದ ಸ್ವರೂಪ,

ವಿವರಣೆ ಅನಂತರ ರಾಜನೀತಿಯನ್ನು ಪ್ರತಿಪಾದಿಸಿದ್ದಾನೆ. ಕ್ರಮವಾಗಿ ಅನೇಕ ಲೌಕಿಕ, ಅಲೌಕಿಕ ವಿಚಾರಗಳನ್ನು ಬಹಳ ಆಳವಾಗಿ ವಿವೇಚಿಸಿದ್ದಾನೆ.

ಪ್ರಮುಖವಾಗಿ ಈ ಗ್ರಂಥದಲ್ಲಿ ವಿವಿಧ ವಿಚಾರಗಳೆಂದರೆ ರಾಜ, ಅವನ ಆಯ್ಕೆ, ಪೋಷಣೆ, ವಿದ್ಯಾಭ್ಯಾಸ ತತ್ವಗಳು. ವೇದ, ವೇದಾಂಗ, ವಿದ್ಯೆ. ಪುರುಷಾರ್ಥಗಳು, ಕರ್ತವ್ಯಗಳು, ಸಪ್ತಾಂಗ, ಆಡಳಿತ ಕ್ರಮ, ನ್ಯಾಯನಿರ್ಣಯ, ವರ್ಣಾಶ್ರಮ ಧರ್ಮ, ಕೃಷಿ, ಪಶುಸಂಗೋಪನೆ, ವಾಣಿಜ್ಯ, ಕೈಗಾರಿಕೆ, ಮಂತ್ರಿಗಳು, ಪರಿಷತ್ತು, ಪರರಾಷ್ಟ್ರಗಳ ಸಂಬಂಧ, ರಾಯಭಾರಿಗಳು, ಆಸ್ಥಾನಿಕರು, ಗೂಢಚಾರರು, ಪ್ರಜಾಸಮುದಾಯ, ಪ್ರಜಾಪ್ರಭುತ್ವ, ಪ್ರಜಾಪ್ರತಿನಿಧಿಗಳು, ಆಡಳಿತದ ವೈಖರಿ, ಕಾನೂನಿನ ವಿವೇಚನೆ, ಪೋಲೀಸು, ತೆರಿಗೆ, ಶಿಕ್ಷೆ, ವೈದ್ಯರು, ವ್ಯಾಪಾರಿಗಳು, ಆಹಾರ ವಸ್ತುಗಳ ಬೆಲೆ, ಅಳತೆ, ತೂಕ, ಸಾರ್ವಜನಿಕ ಆಡಳಿತಗಾರರ ಸೇವೆ, ಸಂಬಳ, ಸಾರಿಗೆ ಹಾಗೂ ಶಾಂತಿ, ಸಮರ ತಾಟಸ್ಥ್ಯ ನೀತಿ, ವಿಜಯಯಾತ್ರೆ, ಸನ್ನಾಹ, ಒಪ್ಪಂದ, ಬೇಟೆ, ಧ್ಯೂತ, ಸ್ತ್ರೀಯರು, ಮಧ್ಯಪಾನ, ಐಕ್ಯತೆ, ರಾಷ್ಟ್ರಪ್ರೇಮ, ನ್ಯಾಯ, ತತ್ವಶಾಸ್ತ್ರ, ಬಲ, ನಂಬಿಕೆ, ಅದೃಷ್ಟ. ಸರ್ಕಾರ, ಸಾಮಾಜಿಕ ಜೀವನ ವ್ಯವಸ್ಥೆಯನ್ನು ಈ ಗ್ರಂಥದಲ್ಲಿ ಕೂಲಂಕುಶವಾಗಿ ವಿವೇಚಿಸಿದ್ದಾನೆ.

ಅರ್ಥಶಾಸ್ತ್ರ ಎಂಬ ಶಬ್ದವು ಇಂದು ಹಣ, ದ್ರವ್ಯ ಅಥವಾ ಸಂಪತ್ತು ಎಂದು ಕರೆಸಿಕೊಂಡಿದ್ದರೂ ಪ್ರಾಚೀನ ಭಾರತದಲ್ಲಿ ಇದಕ್ಕೆ ಬಹುವ್ಯಾಪಕವಾದ ಅರ್ಥವಿತ್ತು. ಅಂದರೆ ಕೆಲವು ಶಾಸ್ತ್ರಜ್ಞರು ಅರ್ಥಶಾಸ್ತ್ರ ಎಂಬ ಪದವನ್ನು ರಾಜನೀತಿಶಾಸ್ತ್ರ ಎಂಬುದಾಗಿ ಕರೆದಿರುವುದುಂಟು. ಸಂಪತ್ತು ಅಥವಾ

ಹಣಕಾಸಿನ ಶಾಸ್ತ್ರ ರಾಜನೀತಿಯ ಒಂದು ಅಂಶವಷ್ಟೆಯಾಗಿದ್ದರಿಂದ ಈ ರೀತಿ ಕರೆದಿರಬಹುದು. ಈ ಜಗತ್ತಿನ ಮಾನವನ ವೃತ್ತಿಯೇ ಅರ್ಥ. ಇದರ ಲಾಭ, ನಷ್ಟ, ವಿನಿಮಯ, ಪಾಲನೆ, ಪೋಷಣೆ ಗಳನ್ನು ವಿವೇಚಿಸುವ ಅಥವಾ ಅಭ್ಯಸಿಸುವ ಶಾಸ್ತ್ರವೇ ಅರ್ಥಶಾಸ್ತ್ರ.

ಅರ್ಥಶಾಸ್ತ್ರದ ಸ್ವರೂಪದ ಬಗ್ಗೆ ವಿಚಾರ ಮಾಡಿದರೆ ಕೌಟಿಲ್ಯನು ಇದನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಅವುಗಳ ಅನುಸರಣೆ ಮತ್ತು ಫಲಾಫಲಗಳ ಬಗೆಗೆ ತಿಳಿಸಿದ್ದಾನೆ. ಅವು ಗಳೆಂದರೆ ಅನ್ವೀಕ್ಷಕಿ, ತ್ರಯೀ, ವಾರ್ತಾ ಮತ್ತು ದಂಡ ನೀತಿ ಅಂದರೆ ಮನಸ್ಸಿನ ಚಪಲಕ್ಕೆ ಹಾಗೂ ಕ್ಲೇಶಗಳಿಗೆ ಈಡಾಗದಂತೆ ಹದಗೊಳಿಸುವ ತತ್ವಶಾಸ್ತ್ರವೇ ಅನ್ವೀಕ್ಷಕಿ, ತ್ರಯೀ ಎಂದರೆ ವೇದ ಮತ್ತು ಧರ್ಮಾಧರ್ಮಗಳ ವಿವೇಚನೆ ಹಾಗೂ ವರ್ಣಾ ಶ್ರಮ ಧರ್ಮಗಳ ಅನುಸರಣೆ ಮತ್ತು ಅವುಗಳಿಂದ ಉಂಟಾಗುವ ಫಲಾಫಲಗಳು. ಅವುಗಳನ್ನು ತಿರಸ್ಕರಿಸಿದರೆ ಉಂಟಾಗುವ ವಿಪತ್ತುಗಳು ಇವುಗಳನ್ನು ತಿಳಿಸುವುದು ವಾರ್ತಾ ಎಂದರೆ ಕೃಷಿ. ಪಶುಪಾಲನೆ, ಕೈಗಾರಿಕೆಗೆ ಸಂಬಂಧಪಟ್ಟವು. ಕೊನೆಯದಾಗಿ ದಂಡನೀತಿ ಬಹುಮುಖ್ಯವಾದುದು. ಇವುಗಳ ಯೋಗಕ್ಷೇಮ ಈ ದಂಡ ನೀತಿಯ ಮೇಲೆ ನಿಂತಿದೆ. ಇದು ನಾಲ್ಕು ಕಾರ್ಯ ಗಳನ್ನು ಹೊಂದಿದೆ. ಅವುಗಳೆಂದರೆ ಅಲಬ್ಧಸ್ಯಲಬ್ಧಾರ್ಥ, ಇಲ್ಲ ದಿರುವುದನ್ನು ಸಂಪಾದಿಸುವುದು, ಲಬ್ಧಪರಿರಕ್ಷಣ'ಗಳಿಸಿದುದನ್ನು ಉಳಿಸುವುದು. ರಕ್ಷಿತ ವಿವರ್ಧಿನೀ ಹಾಗೆ ಉಳಿಸಿದುದನ್ನು ಇನ್ನೂ ಹೆಚ್ಚಿಸುವುದು. "ವೃದ್ಧಸ್ಯ ತೀರ್ಥೇಷು ಪ್ರತಿಪಾದಿನೀ" ಹಾಗೆ ಹೆಚ್ಚಿದುದನ್ನು ಅರ್ಹರಾದವರಿಗೆ ಹಂಚುವುದು. ಇವುಗಳೇ ದಂಡ ನೀತಿಯ ವಸ್ತುಗಳು. ಅದರ ಜೊತೆಗೆ ರಾಜನೀತಿ, ಇದರ ಉದ್ದೇಶ, ಹೊಸ ರಾಜ್ಯಗಳಿಸುವುದು ರಾಜ್ಯದ ಏಳಿಗೆ, ಆಡಳಿತ ವ್ಯವಸ್ಥೆ, ಸಂಪತ್ತಿನ ಸವಿನಿಯೋಗ ಮತ್ತು ಸಂಪತ್ತಿನ ಬೆಳವಣಿಗೆ

ಸಂರಕ್ಷಣೆ, ರಾಜ್ಯದಲ್ಲಿನ ಪ್ರಜಾಯೋಗಕ್ಷೇಮ, ಅದರ ಆಸೆ-ಆಕಾಂಕ್ಷೆಗಳ ಪೂರಣ ಮತ್ತು ಅದರ ಅಭಿವೃದ್ಧಿಯು ದಂಡಧರನ ಭುಜಗಳ ಮೇಲೆ ನಿಂತಿವೆ. ಭುಜಗಳಲ್ಲಿ ದೌರ್ಬಲ್ಯ ಬಂದಾಗ ಆ ರಾಜ್ಯದ ಸುವ್ಯವಸ್ಥೆ, ಸ್ವಾತಂತ್ರ್ಯ, ವರ್ಣಾಶ್ರಮಧರ್ಮಾಚರಣೆ, ಪ್ರಜೆಗಳ ಆಸ್ತಿ-ಪಾಸ್ತಿ ಹಕ್ಕು ಬಾಧ್ಯತೆಗಳ ಸಂರಕ್ಷಣೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಆದ್ದರಿಂದ ದಂಡನೀತಿ ಶಾಸ್ತ್ರ ಮತ್ತು ಅದರ ಬಳಕೆಯು ದಂಡಧರನನ್ನು ಅವಲಂಬಿಸುತ್ತದೆ. ಅಂದರೆ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಕ್ಕೆ ಎಡೆಮಾಡಿಕೊಟ್ಟು ಅವುಗಳನ್ನು ಅನುಸರಿಸಿ ಚತುರೋಪಾಯಗಳ ಮೂಲಕ ದಂಡವನ್ನು ಬಳಸಬೇಕೆಂಬುದು ಕೌಟಿಲ್ಯನ ಅಭಿಮತ. ಸಾಮ, ದಾನ, ಭೇದ, ದಂಡ ಇವೇ ಚತುರೋಪಾಯಗಳು ಒಟ್ಟಾರೆ ದಂಡನೀತಿ ಅತಿಮುಖ್ಯ ಮತ್ತು ಇದರ ಬಳಕೆ ಸಂದರ್ಭೋಚಿತವಾಗಿರಬೇಕು ಎಂದಿದ್ದಾನೆ.

ಅರ್ಥಶಾಸ್ತ್ರದ ಕರ್ತೃವಿಗೆ ಕೌಟಿಲ್ಯ, ಚಾಣಕ್ಯ ಮತ್ತು ವಿಷ್ಣುಗುಪ್ತನೆಂಬ ಮೂರು ಹೆಸರಿವೆ. ಕುಟಿಲನೆಂಬುದು ಪ್ರವರ್ತಕ ಗೋತ್ರಕ್ಕೆ ಸೇರಿದ ಋಷಿಯ ಹೆಸರು. ಅವನು ಈ ಗೋತ್ರದಲ್ಲಿ ಹುಟ್ಟಿದವನಾದ್ದರಿಂದ ಕೌಟಿಲ್ಯನೆಂಬುದು ಗೋತ್ರ ನಿಮಿತ್ತವಾದ ಹೆಸರು. ಚಣಕವೆಂಬ ದೇಶದಲ್ಲಿ ಹುಟ್ಟಿದ್ದರಿಂದ ಚಾಣಕ್ಯನೆಂದು, ವಿಷ್ಣುಭಕ್ತರಾದ ತಂದೆ ತಾಯಿಗಳಿಟ್ಟ ಹೆಸರು ವಿಷ್ಣುಗುಪ್ತನೆಂದು, ಅರ್ಥಶಾಸ್ತ್ರವು ಧರ್ಮೋಪದೇಶವನ್ನು ಮಾಡದೆ ನ್ಯಾಯವಾದ ರಾಜ್ಯ ಪರಿಪಾಲನಾ ಕ್ರಮವನ್ನು ಉಪದೇಶಿಸಿರುವುದರಿಂದ ಇದು ಧರ್ಮಶಾಸ್ತ್ರಗಳ ಸಹೋದರ ಶಾಸ್ತ್ರ. (ಶಾಮಶಾಸ್ತ್ರಿ)

ರಾಜ ಮತ್ತು ಸಪ್ತಾಂಗಗಳು (ರಾಜ್ಯದ ಮೂಲಾಂಶಗಳು)

ರಾಜನ ಆಯ್ಕೆ, ಕರ್ತವ್ಯಗಳು

ಪ್ರಪಂಚವು ಹೇಗೆ ದೈವದ ಮೂಲಕ ಸೃಷ್ಟಿಯಾಗಿದೆಯೋ ಹಾಗೆಯೇ ರಾಜ್ಯವು ಸಹ, ಇದನ್ನು ರಕ್ಷಿಸಿ ಪ್ರಗತಿಯನ್ನು ಸಾಧಿಸಬೇಕಾದರೆ ಇದಕ್ಕೆ ಒಡೆಯನ ಅವಶ್ಯಕತೆಯುಂಟು. ಅವನನ್ನು 'ಸ್ವಾಮಿ' 'ಪ್ರಭು' ರಾಜ, ಒಡೆಯ ಎಂಬ ಅಂಕಿತದಿಂದ ಗುರುತಿಸಬಹುದು. ರಾಜ್ಯವು ತನ್ನದೆ ಆದ ಮೂಲಭೂತ ಅಂಶಗಳನ್ನು ಹೊಂದಿದ್ದು ಅವುಗಳ ಮೂಲಕ ಅದು ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿತ್ತು. ಈ ಅಂಶಗಳೆಂದರೆ ಸಪ್ತ ಪ್ರಕೃತಿಗಳಾದ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ದಂಡ ಮತ್ತು ಮಿತ್ರ. ರಾಜನನ್ನು ಆಯ್ಕೆ ಮಾಡುವಾಗ ಆತನು ಬಲಾಢ್ಯನು, ಶೀಲವಂತನು, ಗುಣಶಾಲಿಯೂ, ವಿವೇಕಿಯೂ, ನೀತಿಶಾಸ್ತ್ರಜ್ಞನು, ನಿಗ್ರಹಾನುಗ್ರಹವುಳ್ಳವನು, ಸಮರ್ಥನು, ವಿಶಾಲ ಬುದ್ಧಿಯುಳ್ಳವನು, ನಿರಹಂಕಾರಿಯೂ, ಉದ್ಯಮ ಶೀಲನು, ಸಮಚಿತ್ತನು, ದಕ್ಷನು, ಸೂಕ್ಷ್ಮಮತಿಯೂ, ಶಾಂತ ಚಿತ್ತನು, ಚಾಣಾಕ್ಷನು, ಹಿತೈಷಿಯೂ ಧಾರ್ಮಿಕನು, ಸ್ವಬುದ್ಧಿಯುಳ್ಳವನು, ಸುಸಂಸ್ಕೃತನು, ಸಂಸ್ಕಾರವುಳ್ಳವನು ಈ ಎಲ್ಲಾ ಗುಣಗಳಲ್ಲದೆ ಹೋದರು ಕೆಲವುಗಳಿದ್ದರೆ ಅಂತಹ ವ್ಯಕ್ತಿಯನ್ನ ರಾಜನನ್ನಾಗಿ

ಮಾಡಬೇಕು ಎಂಬುದನ್ನು ಕೌಟಿಲ್ಯನು ಖಚಿತಪಡಿಸಿದ್ದಾನೆ. ಒಂದು ವೇಳೆ ರಾಜನಿಗೆ ಈ ಗುಣಗಳಿಲ್ಲದೆ ಹೋದರೆ ಅವನಿಂದ ದೇಶದಲ್ಲಿ ಅರಾಜಕತೆಯುಂಟಾಗಿ ರಾಜ್ಯದ ಉದ್ದೇಶ ಸಾದಿತ ವಾಗುವುದಿಲ್ಲ. ಜನರ ಸುಖವೇ ತನ್ನ ಸುಖ ಎಂದು ಅವರ ಹಿತಕ್ಕಾಗಿ ದುಡಿಯುವುದು ಇವನ ಕರ್ತವ್ಯ.

> ಪ್ರಜಾಸುಖೇ ಸುಖಂ ರಾಜ್ಞ ; ಪ್ರಜಾನಾಂ ಚಹಿತೇ ಹಿತಂ
> ನಾತ್ಮ ಪ್ರಿಯಂ ಹಿತಂ ರಾಜ್ಞ ; ಪ್ರಜಾನಾಂತಾ ಪ್ರಿಯಂ ಹಿತಂ
> (ಶಾಮಶಾಸ್ತ್ರಿ)

ರಾಜನು ಉದಾತ್ತವಾದ ಉದ್ದೇಶಗಳನ್ನು ಇಟ್ಟುಕೊಂಡು ಧರ್ಮಪಾರಾಯಣನಾಗಿ, ಪಾರಲೌಕಿಕ ಮತ್ತು ಐಹಿಕ ಪ್ರಜಾ ಸುಖಕ್ಕಾಗಿ ಸಮಾಜದ ಕಟ್ಟಳೆಗಳು ಸಡಿಲವಾಗದಂತೆಯೂ, ಧರ್ಮ ಭ್ರಷ್ಟತೆಯಾಗದಂತೆ ರಾಜ್ಯದ ಸೂತ್ರವನ್ನು ನಡೆಸ ಬೇಕು. ಒಟ್ಟಾರೆ ಧರ್ಮಪರಿಪಾಲನೆ ಮುಖ್ಯ. ವರ್ಣಾಶ್ರಮ ಧರ್ಮಕ್ಕೆ ತಕ್ಕಂತೆಯು ಆಯಾ ಜಾತಿಗೆ ಸಂಬಂಧಪಟ್ಟ ಸಮಾಜ ನೀತಿ, ರಾಜಕೀಯ ವ್ಯವಹಾರ, ಆಧ್ಯಾತ್ಮಿಕ ಪ್ರಗತಿಗಳ ಉತ್ತೇಜಕವಾಗಿ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷ ಎಲ್ಲರಿಗೂ ಲಭಿಸುವಂತೆ ಮಾಡುವವನಾಗಿರಬೇಕು. ವೈದಿಕ ಧರ್ಮಕ್ಕನುಸಾರವಾಗಿ ಯಾಗ, ಯಜ್ಞ, ಜಪ, ತಪ, ಹೋಮ ಅಧ್ಯಯನ, ಯೋಧವೃತ್ತಿಗೆ ಉತ್ತೇಜನ, ಭೂ ದಕ್ಷಿಣೆ, ವಾಣಿಜ್ಯ, ಕೃಷಿಕರ್ಮ, ಕೈಗಾರಿಕೆ, ಪಶುಪಾಲನೆ ಮುಂತಾದ ಕರ್ತವ್ಯಗಳ ಹೊಣೆಗಾರಿಕೆ ರಾಜನಿಗೆ ಸೇರಿದ್ದು. ಇವನು ಕೈಗೊಳ್ಳುವ ಪ್ರತಿಯೊಂದು ಕಾರ್ಯವು ಧರ್ಮಕ್ಕೂ, ವ್ಯಕ್ತಿ ಸ್ವಾತಂತ್ರ್ಯಕ್ಕೂ ಧಕ್ಕೆ ತರದಂತಿರಬೇಕು. ಶಿಸ್ತಿನಿಂದ ರಾಜ್ಯದ ಏಳಿಗೆಗಾಗಿ ಸೇವಕನಂತೆ ದುಡಿಯುವುದು ಇವನ ಕರ್ತವ್ಯ.

ಯಾವುದೇ ರಾಜ್ಯ ಬಲಿಷ್ಟವಾಗಿರಬೇಕಾದರೆ ಅಲ್ಲಿಯ ರಾಜ ಬಲಿಷ್ಟನಾಗಿರಬೇಕು ಹಾಗೂ ಇದು 'ತ್ರಿಶಕ್ತಿ'ಗಳನ್ನು ಹೊಂದಿರಬೇಕು. ಅವುಗಳೆಂದರೆ

1) ಪ್ರಭಾವಶಕ್ತಿ (ಪ್ರಭುಶಕ್ತಿ)

2) ಮಂತ್ರಶಕ್ತಿ

3) ಉತ್ಸಾಹ ಶಕ್ತಿ

1) ಪ್ರಭಾವಶಕ್ತಿ : ಎಂದರೆ ರಾಷ್ಟ್ರ ಭೂಸಂಪತ್ತಿನಿಂದ ಕೂಡಿದ್ದು ಸಮೃದ್ಧವಾಗಿದ್ದು ಸಜ್ಜನರಿಂದ ಆವೃತವಾಗಿ, ಅಲ್ಲಿಯ ಎಲ್ಲಾ ಕ್ಷೇತ್ರಗಳು ಬಲವಾಗಿದ್ದು ಪರರಾಷ್ಟ್ರಗಳ ಮೇಲೆ ಪ್ರಭಾವ ಬೀರುವಂತಿರಬೇಕು.

2) ಮಂತ್ರ ಶಕ್ತಿ : ಒಳ್ಳೆಯ ನೀತಿ, ನಡತೆ, ನಿಯಮ, ಧರ್ಮ, ನ್ಯಾಯ, ಶಿಸ್ತು, ಸಂಯಮ ಶಾಂತಿಯುತೆ, ಕ್ರಾಂತಿಯುತೆ ಹಾಗೂ ಒಳ್ಳೆಯ ಸಲಹಾಕಾರರಿದ್ದು ಬುದ್ಧಿವಂತರಿರಬೇಕು.

3) ಉತ್ಸಾಹಶಕ್ತಿ : ಇದು ರಾಜನ ವೈಯಕ್ತಿಕತೆಗೆ ಸಂಬಂಧಪಟ್ಟಿರುತ್ತದೆ. ಇವನ ಮೇಲೆ ರಾಜ್ಯ ನಿಂತಿರುತ್ತದೆ. ಸುಖೀರಾಜ್ಯ ಅಥವಾ ಕಲ್ಯಾಣ ರಾಜ್ಯ ಮಾಡಲು ಇವನು ಯತ್ನಿಸಬೇಕು, ಇವನು ಶಕ್ತಿವಂತನಾಗಿದ್ದು ದೇಶದ ಹೊರ ಮತ್ತು ಒಳಗಿನ ಶತ್ರುಗಳನ್ನು ಸದೆ ಬಡಿದು, ಅತ್ಯಾಚಾರ, ಅನ್ಯಾಯ, ದರೋಡೆ, ಲೂಟಿಗಳು ನಡೆಯದಂತೆ ಶಿಸ್ತನ್ನು ಕಾಪಾಡಿಕೊಂಡು ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಪಾಡಿಕೊಳ್ಳಬೇಕು.

ರಾಜ್ಯದ ಅಂಗಗಳು (ಸಪ್ತಾಂಗಗಳು ಅಥವಾ ಏಳು ಅಂಗಗಳು)

ರಾಜನೊಬ್ಬನಿಂದಲೇ ರಾಜ್ಯ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಇತರ ಅಂಗಗಳನ್ನು ಹೊಂದಿರಬೇಕು. ಈ ದಿನ ಹೇಗೆ ರಾಜ್ಯಕ್ಕೆ ನಾಲ್ಕು ಮೂಲಾಂಶಗಳಿವೆಯೋ ಹಾಗೆಯೆ ಕೌಟಿಲ್ಯನು ಸಪ್ತಾಂಗವನ್ನು ಪ್ರಸ್ತುತ ಪಡಿಸಿದ್ದಾನೆ. ಅವು ಗಳೆಂದರೆ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ.

ಅ) ಸ್ವಾಮಿ (ಒಡೆಯ, ಪ್ರಭು) ರಾಜನನ್ನು ಸ್ವಾಮಿ ಎಂಬ ಪದದಿಂದ ಗೌರವಯುತವಾಗಿ ಕರೆದು, ಪ್ರಧಾನ, ಪವಿತ್ರ, ಸ್ಥಾನಮಾನ ನೀಡಿ ರಾಜ್ಯಕ್ಕೆ ಕೇಂದ್ರ ಬಿಂದುವೆಂದು ರಾಜ್ಯದ ಸಮಸ್ತ ಕಾರ್ಯ ಇವನ ಮೂಲಕವೇ ನಡೆಯಬೇಕು. ಇವನಿಗೆ ಅತಿ ಹೆಚ್ಚಿನ ಸ್ಥಾನ ನೀಡಲು ಆ ದಿನದ ರಾಜಕೀಯ ಪರಿಸ್ಥಿತಿ ಕಾರಣವಿರಬಹುದು. ಅಂದರೆ ಆ ದಿನದ ರಾಜ್ಯಗಳು ವಿವಿಧ ರೀತಿಯ ಪ್ರಭುತ್ವ ಅಥವಾ ಆಡಳಿತವುಳ್ಳವುಗಳಾಗಿ ರಾಜ್ಯಗಳು ಅಳಿಯುತ್ತಾ ಬಂದಿದ್ದು, ಐಕ್ಯತೆ ಇಲ್ಲದೆ ರಾಜ ಪ್ರಭುತ್ವದಲ್ಲಿ ಒಡಕುಂಟಾಗಿ ತಮ್ಮ ತಮ್ಮಲ್ಲೆ ಕಾದಾಟಗಳು ಕಲಹಗಳು ಏರ್ಪಟ್ಟು, ರಾಜ್ಯದಲ್ಲಿ ಅರಾಜಕತೆಯುಂಟಾಗಿ ಮತ್ಸ್ಯ ನ್ಯಾಯ ತಲೆದೋರತೊಡಗಿತು ಹಾಗೂ ಪ್ರಜೆಗಳು ಗುಲಾಮರಾಗುವ ಚಿಹ್ನೆಗಳು ಕಾಣಿಸಿಕೊಂಡು ಪರಕೀಯರನ್ನು ಬದುಕಿಸುತ್ತೇವೆ ಎಂಬ ಮಾತಾಗಲಿ, ಶಕ್ತಿಯಾಗಲಿ ಕಾಣಲಿಲ್ಲವಾದ್ದರಿಂದ ಪ್ರಜೆ ಗಳಿಗೆ ನಾಯಕನೊಬ್ಬನ ಅವಶ್ಯಕತೆಯಿತ್ತು. ಅವನಿಗೆ ಜನಗಳು ವಿಧೇಯರಾಗಿ ಭೀತಿಯಿಂದ ಪ್ರಕೃತಿ ಕೊಡುಗೆಗಳಿಗೆ ಗೌರವ ಕೊಡುವವರು ದಕ್ಷ, ಶಕ್ತಿಯುತ ಸಂರಕ್ಷಕನೊಬ್ಬನಿಗೆ ತಲೆ ಬಾಗಿದರು ಅವನೇ ಸ್ವಾಮಿ, ದೇವರ ಪ್ರತಿನಿಧಿ, ದೈವೀಕ ಪುರುಷ, ಹಿತ ಚಿಂತಕ, ವಿವೇಚಿಸುವವ, ಪರಿಶೀಲಿಸುವವ

ಆಧ್ಯಾತ್ಮಿಕ ಹಾಗೂ ನೈತಿಕ ಜೀವನಕ್ಕೆ ಬೆಲೆ ಕೊಟ್ಟು ದೇಶವನ್ನು ಮುನ್ನಡೆಸುವ ಎಂಬ ದೃಷ್ಟಿಯಿಂದ ಈತನನ್ನು ಜನರು ಬಹಳ ಗೌರವದಿಂದ ಕಾಣುತ್ತಿದ್ದರು.

ರಾಜನು ರಾಜ್ಯದ ಸೇವಕನಂತಿದ್ದು ಸಪ್ತಾಂಗಗಳು ಸರಿಯಾಗಿ ಕೆಲಸ ಮಾಡಬೇಕಾದರೆ ರಾಜ ಸರಿಯಿರಬೇಕು. ರಾಷ್ಟ್ರಕ್ಕೂ, ಪ್ರಕೃತಿಗೂ, ಸಮಸ್ತಕ್ಕೂ ಇವನೇ ಯಜಮಾನ. ಸಮಸ್ತ ವಿಷಯಗಳು ಇವನ ವ್ಯಾಪ್ತಿಗೆ ಬರುತ್ತವೆ. ಮಂತ್ರಿಗಳ, ಅಧಿಕಾರಿಗಳ ಆಯ್ಕೆ, ರಾಜ್ಯದ ರಕ್ಷಣೆ, ರಾಜ್ಯದ ಪ್ರಗತಿ, ಅಭ್ಯುದಯ, ವಿಸ್ತರಣೆ, ಪಾಲನೆ, ಪೋಷಣೆ ಪ್ರಜಾಪಾಲನೆ, ಪ್ರಜಾಆಡಳಿತ, ಶತ್ರುಗಳನ್ನು ಜಯಿಸುವುದು ದುಷ್ಟರಿಗೆ ಶಿಕ್ಷೆ, ಶಿಷ್ಟರ ರಕ್ಷಣೆ, ರಾಷ್ಟ್ರಕ್ಕೆ ವಿಪತ್ತು ಬರದ ಹಾಗೆ ಜವಾಬ್ದಾರಿಯಿಂದ, ನಾಗರಿಕನಾಗಿ, ಸತ್ಯಸಂಧನಾಗಿ ದಕ್ಷತೆಯಿಂದ ಜಿತೇಂದ್ರಿಯನಾಗಿ ರಾಜ್ಯಭಾರವನ್ನು ನಡಸಬೇಕು ಎಂಬುದು ಕೌಟಿಲ್ಯನ ಮತ ರಾಜನ ಆಡಳಿತ ವೈಖರಿಯನ್ನು 8 ನಳಿಕೆಗಳಾಗಿ ವಿಂಗಡಿಸಿದ್ದಾನೆ, ಅವುಗಳೆಂದರೆ :

1 ಆಯ ವ್ಯಯದ ಪರಿಶೀಲನೆ

2 ಪ್ರಜೆಗಳ ಯೋಗಕ್ಷೇಮ

3 ವೇದ ತತ್ವಶಾಸ್ತ್ರ ಅಧ್ಯಯನ

4 ಹಿರಣ್ಯ ಸ್ವೀಕಾರ ಮತ್ತು ಮುಖ್ಯಾಧಿಕಾರಿಗಳಿಗೆ ದರ್ಶನ

5 ಅಮಾತ್ಯರೊಡನೆ ಮಂತ್ರಾಲೋಚನೆ

6 ಗೂಢಾಚಾರರೊಡನೆ ಸಮಸ್ತ ವಿಷಯಗಳ ಪ್ರಸ್ತಾಪ

7 ಚತುರಂಗ ಬಲಪರೀಕ್ಷೆ

8 ಸೇನಾಪತಿಗಳೊಡನೆ ಮಂತ್ರಾಲೋಚನೆ, ರಾತ್ರಿವೇಳೆಯಲ್ಲಿ ವಿಶ್ರಾಂತಿ ಉಳಿದಹಾಗೆ ಪ್ರಜಾಭ್ಯುದಯದ ಬಗೆಗೆ ಚಿಂತನೆ.

(ಆ) ಅಮಾತ್ಯ (ಮಂತ್ರಿ ಪರಿಷತ್ತು)

ರಾಜನ ನಂತರ ಇವನೇ ಬಹಳ ಮುಖ್ಯವಾದವನು. ರಾಜನೊಬ್ಬನೆ ಏನನ್ನು ಸಾಧಿಸಲಾರ. ಆದ್ದರಿಂದ ಮಂತ್ರಿ ಪರಿಷತ್ತು ಅತ್ಯಾವಶ್ಯಕ ರಾಜನು ತ್ರಿಶಕ್ತಿಗಳನ್ನು ಹೊಂದಿದ್ದರು ಕೂಡ ಒಳ್ಳೆಯ ಮಂತ್ರಿಯಿರಬೇಕು. ಆಗ ಮಾತ್ರ ಪ್ರಜೆಗಳು ಸುಖದಿಂವ, ಶಾಂತಿಯಿಂದ, ಸಹಬಾಳ್ವೆಯಿಂದ ಬದುಕುವುದಲ್ಲದೆ, ರಾಷ್ಟ್ರ, ಸಮಾಜ ಚನ್ನಾಗಿರುತ್ತದೆ. ಆದ್ದರಿಂದ ಒಳ್ಳೆಯ ಮಂತ್ರಿಗಳಿದ್ದರೆ ಒಳ್ಳೆಯ ಆಡಳಿತ, ಒಳ್ಳೆಯ ರಾಜ್ಯ, ಪ್ರಜೆಗಳು ಇವನ ಒಳ್ಳೆಯ ಸಲಹೆಗಳಿಂದ ಒಳ್ಳೆಯ ಕಾನೂನು, ನ್ಯಾಯ ವ್ಯವಸ್ಥೆ ಉದ್ದೀಪನ ಕಾರ್ಯಗಳು ನಡೆಯುತ್ತವೆ. ಇವರನ್ನು ರಾಜನು ಆಯ್ಕೆ ಮಾಡುತ್ತಾನೆ. ಮಾಡುವಾಗ ಅನೇಕ ಅರ್ಹತೆಗಳನ್ನು ಉಳ್ಳವನಾಗಿದ್ದು ಧರ್ಮೋಪದ, ಅರ್ಥೋಪದ, ಭಯೋಪದ, ಕಾಮೋಪದದಂತಹ ಪರೀಕ್ಷೆಗಳನ್ನು ನಡೆಸಿ ಅದರಲ್ಲಿ ಜಯಗಳಿಸಿದವರನ್ನು ಮಂತ್ರಿಗಳನ್ನಾಗಿ ಆಯ್ಕೆ ಮಾಡುವುದು ಒಳಿತು ಎಂದಿದ್ದಾನೆ.

ಕೆಟ್ಟಮಂತ್ರಿಗಳಿದ್ದರೆ ದೊರೆ, ರಾಜ್ಯ, ಪ್ರಜೆಗಳು ಕೆಡುತ್ತಾರೆ ಆದ್ದರಿಂದ ಉತ್ತಮರನ್ನು, ಉತ್ಕೃಷ್ಟ ಮಂತ್ರಿಗಳಿರಬೇಕು. ರಾಜ್ಯ, ಸೈನ್ಯ, ಪ್ರಜೆಗಳು ಎಷ್ಟೇ ಬಲಿಷ್ಟರಾಗಿದ್ದರು ಇವರು ಸರಿಯಿಲ್ಲದಿದ್ದರೆ ಎಲ್ಲವೂ ವ್ಯರ್ಥ. ಇದನ್ನು ಮಂತ್ರಿ ಪರಿಷತ್ತೆಂದು ಕರೆದು ರಾಜನ ಎರಡು ಕಣ್ಣುಗಳಿದ್ದಂತೆ ಇದರ

ಸಹಾಯದಿಂದ ರಾಜನು ಕಾರ್ಯಾರಂಭ ಮಾಡಬೇಕು. ಮಂತ್ರಿಯಾಗುವವನು ಸರ್ವ ಗುಣ ಸಂಪನ್ನನಾಗಿರಬೇಕು. ಒಟ್ಟಾರೆ ದೊರೆಯು ಮಂತ್ರಿ ಪರಿಷತ್ತಿನ ಗಮನಕ್ಕೆ ತರದೆ ಏನನ್ನು ಮಾಡುವಂತಿಲ್ಲ. ಮಂತ್ರಿ ಪರಿಷತ್ತಿನಲ್ಲಿ ಪ್ರಧಾನಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ ಇವರುಗಳಿಂದ ಕೂಡಿದ ಒಳಮಂಡಲವಿದ್ದು, ದೌವಾರಿಕ, ಅಂತರ್ವಂಶಿಕ, ಪ್ರಶಾಸ್ತ, ಸಮೂಹರ್ತ್ರ್ಯ, ಸನ್ನಿಧಾತ್ರ, ಪ್ರದೇಷ್ಟ್ರ, ಮತ್ತು ಅಮಾತ್ಯರಿಂದ ಕೂಡಿದ ಹೊರವಲಯವಿದೆ. ಇದರ ಜೊತೆಗೆ ಪೌರ ಮುಖಂಡರು, ಸಂಘ ಸಂಸ್ಥೆಗಳು, ಪ್ರಮುಖರು ಇರಬೇಕು. ರಾಜನು ವಿವಿಧ ಸಚಿವರುಗಳಿಗೆ ವಿವಿಧ ಖಾತೆಗಳನ್ನು ಹಂಚಿ ರಾಜ್ಯದ ಆಡಳಿತ ಸೂತ್ರದಾರನಂತೆ ಇರಬೇಕು. ಜೊತೆಗೆ ವಿವಿಧ ಅಧಿಕಾರಿಗಳಿರುತ್ತಾರೆ. ಅವರುಗಳನ್ನು ಅಷ್ಟಾದಶ ತೀರ್ಥರೆಂದು ಹೇಳಲಾಗಿದೆ. (18 ಜನ) ಅವರುಗಳೆಂದರೆ : ಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ, ದೌವಾರಿಕ, ಅಂತರ್ವಂಶಿಕ, ಪ್ರಶಾಸ್ಕ, ಸಮೂಹರ್ತ್ರ್ಯ, ಸನ್ನಿಧಾತ್ರ, ಪ್ರದೇಷ್ಟ್ರ, ನಾಯಕ, ಪೌರವ್ಯವಹಾರಿಕ, ಕರ್ಮಾಂತಿಕ ಮಂತ್ರಿ ಪರೀಕ್ಷಾಧ್ಯಕ್ಷ, ದಂಡಪಾಲ, ದುರ್ಗಪಾಲ, ಅಂತಪಾಲ, ಆಟವಿಕ ಇವರಲ್ಲದೆ ನಾಗರಿಕ, ಧರ್ಮಸ್ಥ, ವಿವಿಧ ಅಧ್ಯಕ್ಷರು, ಸ್ಥಾನಿಕ, ಗೋಪ ಮುಂತಾದವರ ಮೂಲಕ ರಾಜ್ಯಭಾರ ಕ್ರಮವನ್ನು ನಡೆಸಲಾಗುತಿತ್ತು. ಇಲ್ಲಿ ವಿವಿಧ ಖಾತೆಗಳೆಂದರೆ, ವಾಣಿಜ್ಯ ವ್ಯವಹಾರ, ಶುಲ್ಕ ವ್ಯವಹಾರ, ಸುರದಾನಾಧ್ಯಕ್ಷ, ಗಣಿಕಾಧ್ಯಕ್ಷ, ಸೂತ್ರಾಧ್ಯಕ್ಷ, ನಾವಾಧ್ಯಕ್ಷ, ಆಕರಾಧ್ಯಕ್ಷ, ಅಕ್ಷಪಟಲಾಧ್ಯಕ್ಷ, ಸುರಪಾನಧ್ಯಕ್ಷ, ಕೋಶಾಧ್ಯಕ್ಷ, ಮತ್ತು ಕೋಶ ಸಂಗ್ರಹ ಹೀಗೆ ಮಂತ್ರಿ ಪರಿಷತ್ತಿನ ಮೂಲಕ ರಾಜ್ಯದ ಆಡಳಿತವನ್ನು ರಾಜನು ನಡೆಸಿಕೊಂಡು ಹೋಗಬೇಕಾಗಿತ್ತು.

(೩) ಜನಪದ (ಜನಸಂಖ್ಯೆ)

ಇದು ಸ್ವಾಮಿ, ಅಮಾತ್ಯ ಅಂಗಗಳಂತೆಯೇ ಮುಖ್ಯ ಒಂದು ವೇಳೆ ಅವೆರಡು ಇಲ್ಲವಾದರು ಕಾಲ ಕಳೆಯಬಹುದು ಆದರೆ ಜನಪದವೇ ಇಲ್ಲವಾದರೆ ಅದನ್ನು ರಾಜ್ಯ ಎಂದು ಕರೆಯುವುದು ಅಸಮಂಜಸವು, ಅಸಂಬದ್ಧವು. ಕಷ್ಟವು ಎನಿಸುತ್ತದೆ. ಇದರ ಬೆಂಬಲವಿಲ್ಲದಿದ್ದರೆ ರಾಜನಾಗಲಿ ರಾಜ್ಯಕ್ಕಾಗಲಿ ಯಾವುದೇ ರೀತಿಯ ಸ್ಥಾನಮಾನವಿರುವುದಿಲ್ಲ ಎಂಬುದು ನಗ್ನಸತ್ಯ. ಜನಪದ ಮತ್ತು ರಾಜನ ಸಂಬಂಧವನ್ನು ಹಸು ಕರುವಿಗೆ ಕೌಟಿಲ್ಯನು ಹೋಲಿಸಿದ್ದಾನೆ. ಹಸುವಿಲ್ಲದೆ ಕರು ಬದುಕಲಾರದು ; ಅದರಂತೆಯೇ ಜನಪದವಿಲ್ಲದಿದ್ದರೆ ರಾಜನು ಇಲ್ಲ. ಯಾವ ಶಾಸನಗಳನ್ನೇ ಆಗಲಿ, ಜನಪದದ ಗಮನಕ್ಕೆ ತಂದು ಅವರ ಒಪ್ಪಿಗೆಗೆ ಅನುಸಾರವಾಗಿ ರಚಿಸಬೇಕಾಗಿತ್ತು. ಜನಪದದಲ್ಲಿ ಮುಖ್ಯವಾಗಿ ಗ್ರಾಮ, ಸಂಗ್ರಹಣ, ಖಾರ್ವಟಕ, ದ್ರೋಣಮುಖ, ಸ್ಥಾನೀಯ ರಾಜಕೀಯ ಆಡಳಿತ ವಿಭಾಗಗಳಿದ್ದು, ಗ್ರಾಮ ಪಂಚಾಯಿತಿಗಳು, ವರ್ತಕ ಮಂಡಲಿಗಳು, ಕೂಲಿಗಾರರ ಶ್ರೇಣಿ, ವಿದ್ಯಾಸಂಸ್ಥೆ, ಸಾಮಾಜಿಕ ಹಾಗೂ ದೇಶದ ಆರ್ಥಿಕಮೇಲ್ಮೆ ಕೃಷಿ, ಕೈಗಾರಿಕೆ, ಧರ್ಮ ಮತ್ತು ಪ್ರಜಾ ಸೌಖ್ಯಕ್ಕೆ ಬೇಕಾಗುವ ಸಂಘಗಳಿದ್ದು ಇವುಗಳ ಮೇಲ್ವಿಚಾರಣೆಗಾಗಿ ಒಬ್ಬೊಬ್ಬನ ಮೇಲೂ ವಿಚಾರಕನಿದ್ದು ಅವರವರ ಸ್ವಾತಂತ್ರ್ಯಕ್ಕೆ ಭಂಗಬರದಂತೆ ರಾಷ್ಟ್ರಕ್ಕೆ ಹಾನಿಯುಂಟಾಗದಂತೆ ನೋಡಿಕೊಳ್ಳಬೇಕು ಪ್ರಜಾಹಿತಕ್ಕೆ ಕುಂದು ಕೊರತೆಯುಂಟಾದರೆ ರಾಜನನ್ನು ಪದಚ್ಯುತಿ ಮಾಡುವ ಭಯ ಆ ದಿನದ ಸಮಾಜದಲ್ಲಿತ್ತು.

ಹಳ್ಳಿಗಳಲ್ಲಿ ಶೂದ್ರರ ಮತ್ತು ಕೃಷಿಕರ ಸಂಖ್ಯೆ ಹೆಚ್ಚಾಗಿರಬೇಕು. ಬೇಸಾಯ ಹಾಗೂ ಕೂಲಿಯಾದರು ಮಾಡಿ ದೇಶದ ಸಂಪತ್ತನ್ನು ವೃದ್ಧಿಗೊಳಿಸಬೇಕು. ಇವರ ಮೂಲಕವೇ ದೇಶ ಮುಂದುವರಿಯುವುದು. ಸಾಗುವಳಿ ಮಾಡುವವರಿಗೆ ಎಲ್ಲಾ ಅನುಕೂಲ ಮಾಡಿಕೊಡುವುದು ಅಂದರೆ ನೀರಿನ ಸೌಕರ್ಯ ಮತ್ತಿತರ ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಗ್ರಿಗಳನ್ನು ಒದಗಿಸುವುದು. ಯಾರು ಕೆಲಸ ಮಾಡುವುದಿಲ್ಲವೋ ಅವರ ಮೇಲೆ ಕ್ರಮಕೈಗೊಳ್ಳುವುದು. ಇನ್ನು ಮುಂತಾದ ಪ್ರಜಾ ರಕ್ಷಿತಾ ಕಾರ್ಯಕ್ರಮಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಂಘ ಸಂಸ್ಥೆಗಳಿದ್ದು ಇವುಗಳು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲಾಗುತ್ತಿತ್ತು. ಜನಪದಕ್ಕೆ ಯಾವ ರೀತಿಯ ಅನುಕೂಲಗಳು ಬೇಕೋ ಅವುಗಳೆಲ್ಲವನ್ನೂ ರಾಜ ನೀಡಬೇಕಿತ್ತು.

ರಾಜನಿಗೆ ಭೂಮಿಯ ಮೇಲೆ ಸ್ವಾಮ್ಯವಿದೆಯೆ ವಿನಃ ಪ್ರಜೆಗಳ ಮೇಲಲ್ಲ ಎಂಬ ಮಾತನ್ನು ಕೌಟಿಲ್ಯನೇ ಹೇಳಿದ್ದಾನೆ. ಅದರ ಜೊತೆಗೆ ರಾಜನು ಸಮಸ್ತಕ್ಕೂ ಒಡೆಯ ಪ್ರಜೆಗಳಿಗೂ ಇವನಿಗೂ ನಿಕಟ ಸಂಬಂಧವಿದೆ. ಈ ವಿಚಾರವನ್ನು ಶಾಮ ಶಾಸ್ತ್ರಿ, ಡಾ॥ ಥಾಮಸ್ ಡಾ॥ ಸ್ಮಿತ್, ಡಾ॥ ಜಯಸ್ವಾಲ ಡಾ॥ ಸಿಹ್ನ, ಕಾಂಗ್ಲೆ ಅವರುಗಳು ಸಮರ್ಥಿಸಿದ್ದಾರೆ.

ಈ) ದುರ್ಗ (ಕೋಟೆ): ಜನಪದದ ರಕ್ಷಾ ಕವಚ. ರಾಜ್ಯದ ಒಳ ಮತ್ತು ಹೊರ ಶತ್ರುಗಳ ಭೀತಿಯನ್ನು ತಪ್ಪಿಸಿ ಶಾಂತಿ ಸ್ಥಾಪಿಸಬೇಕಾದರೆ ದುರ್ಗಮುಖ್ಯ. ಇದು ಬಲಯುತವಾಗಿದ್ದು ಶತ್ರುಗಳು ಆಕ್ರಮಣ ಮಾಡದಂತೆ ಇರಲು, ರಾಜನು

ಅಜಾಗರೂಕನಾಗಿದ್ದಾಗಲೀ ಅಥವಾ ಯಾವುದೇ ಶತ್ರುಗಳು ಪ್ರವೇಶಿಸದಂತೆ ತಡೆಯಲು ಅನುಕೂಲವಾಗಿದ್ದು ಅದರಲ್ಲಿ ಗೂಢಚಾರರು, ಸಮಾಚಾರವಾಹಕರು ಇರುತ್ತಿದ್ದರು. ಜೊತೆಗೆ ಒಳ ಮತ್ತು ಹೊರ ಶತ್ರುಗಳ ದಮನಕ್ಕಾಗಿ ಇದು ಅವಶ್ಯಕ.

ಕೌಟಿಲ್ಯನು ದುರ್ಗಗಳನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಿ ಅವುಗಳೆಂದರೆ ನೀರಿನೊಳಗಿನ, ಮರುಭೂಮಿಯಲ್ಲಿಯ, ಗುಡ್ಡಗಾಡಿನಲ್ಲಿಯ ಅಂದರೆ ಪರ್ವತ ಜನಪದದ ನಡುವಿನಲ್ಲಿ ನದಿಗಳ ಸಂಗಮ, ಸರೋವರದ ನೆರೆಯಲ್ಲಿ ಸ್ಥಾನೀಯ ಎಂಬ ಪಟ್ಟಣಗಳನ್ನು ನಿರ್ಮಾಣಮಾಡಬೇಕು. ಅದರ ಸುತ್ತಲೂ ಭದ್ರವಾದ ಕೋಟೆಯಿರಬೇಕು. ಅದಕ್ಕೆ ಮೇಲುದಾರಿಗಳು, ಕೊತ್ತಲಗಳು, ಗೋಪುರಗಳು ಕೂಡ ಸರಿಯಾದ ಜಾಗದಲ್ಲಿ ಇರಬೇಕು. ಸುತ್ತಲು ಕಂದಕವಿದ್ದು ಕ್ರೂರವಾದ ಜಲಚರಗಳಿದ್ದು ಮುಳ್ಳುಗಳಿಂದ, ಜೊತಂತಿಯ ಬೇಲಿಯಿಂದ, ಗಾಜು, ಕಬ್ಬಿಣದ ಕಟ್ಟಿಗೆಯ ಗೂಟ, ಚೂಪಾದ ಆಯುದಗಳನ್ನು ನೆಟ್ಟಿದ್ದು ಶತ್ರುಗಳುಒಳಬರದಂತೆ ಇರಬೇಕು. ಅದರ ಜೊತೆಗೆ ಒಳಗೆ ಹೋಗಲು ಸುರಂಗಮಾರ್ಗ, ಗುಪ್ತ ಮಾರ್ಗ, ಜಲಮಾರ್ಗಗಳಿರಬೇಕು. ಪರ ರಾಷ್ಟ್ರದ ಶತ್ರುಗಳು ಒಳಬರದಂತೆ ರಾಜ್ಯದ ನಾಲ್ಕು ಮೂಲೆಗಳಲ್ಲಿ ಭದ್ರವಾದ ಕೋಟೆಯಿದ್ದು ಪ್ರಜಾ ರಕ್ಷಣೆಯನ್ನು ಸದಾ ಕಾಲದಲ್ಲಿಯೂ ಮಾಡುವಂತಿರಬೇಕು.

ಉ) ಸೈನ್ಯ (ಬಲ)

ರಾಷ್ಟ್ರ ರಕ್ಷಣೆಗೆ ಕೋಟೆ ಎಷ್ಟು ಮುಖ್ಯವೋ ಹಾಗೆಯೆ ಇದು. ಇದಿಲ್ಲದೆ ಹೋದರೆ ರಾಷ್ಟ್ರ ರಕ್ಷಣೆ. ಪ್ರಜಾ ರಕ್ಷಣೆ ಕಾರ್ಯ ಸಾದ್ಯವಿಲ್ಲ. ಗ್ರಾಮ ಎಷ್ಟು ಮುಖ್ಯವೋ ಅಷ್ಟೆ ಸೈನ್ಯವೂ ಮುಖ್ಯ' (ಕಾಂಗ್ಲೆ) ಚತುರಂಗಬಲದಿಂದ ಕೂಡಿದ್ದು ಪ್ರತಿ

ಯೊಂದರಲ್ಲಿಯೂ ಅನೇಕ ಭಾಗಗಳಿದ್ದು ಅಲ್ಲಿ ದಂಡನಾಯಕ ಅವನ ಕೈ ಕೆಳಗೆ ಅನೇಕ ಸೈನ್ಯಾಧಿಕಾರಿಗಳಿದ್ದು ಅವರು ಶಿಸ್ತನ್ನು ಪರಿಪಾಲಿಸುತ್ತಿದ್ದರು. ಈ ವೃತ್ತಿ ಬಹಳ ಕಟ್ಟುನಿಟ್ಟಾಗಿದ್ದು ಅನೇಕ ನಿಯಮಗಳನ್ನು ಅನುಸರಿಸಲಾಗುತ್ತಿತ್ತು. ಯುದ್ಧ ಮಾಡುವಾಗ ಶತ್ರುಪ್ರದೇಶದಲ್ಲಿ ಸ್ತ್ರೀಯರನ್ನು, ದುರ್ಬಲರನ್ನು ನಿದ್ರಿಸುವವರನ್ನು, ನಿರಾಶ್ರಿತರನ್ನು, ಕೃಷಿ, ಕೈಗಾರಿಕೆ, ದೇವಾಲಯ, ಖಾಸಗಿ ಆಸ್ತಿ ಪಾಸ್ತಿಗಳಿಗೆ ಚ್ಯುತಿ ತರುವುದನ್ನು ಕಟ್ಟುನಿಟ್ಟಾಗಿನಿಷೇಧಿಸಲಾಗಿತ್ತು. ಆ ದಿನದ ಪರಿಸ್ಥಿತಿ ಬಹಳ ಹದಗೆಟ್ಟಿದರಿಂದ ರಾಜರಾಜರುಗಳು ದ್ವೇಷಿಸುತ್ತಾ ಅವರವರಲ್ಲೆ ಒಳ ಜಗಳ ಉಂಟಾಗಿ ರಾಷ್ಟ್ರವನ್ನು ಹಾಳು ಮಾಡುತ್ತಿದ್ದರು. ಜೊತೆಗೆ ಪದೇ ಪದೇ ಪರಕೀಯ ಆಕ್ರಮಣ ನಡೆಯುತ್ತಿದ್ದರಿಂದ ರಾಜನು ಯಾವಾಗಲು ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಸಿದ್ಧವಾಗಿರಬೇಕಿತ್ತು.

ಊ) ಕೋಶ (ಖಜಾನೆ) (ಭಂಡಾರ)

ಈ ಜಗತ್ತಿನ, ಜೀವನದ ಮೂಲಭೂತ ವಸ್ತುಗಳಲ್ಲಿ ಹಣವು ಪ್ರಮುಖ ಸ್ಥಾನವನ್ನು ಹೊಂದಿದೆ. ಯಾವುದೇ ರಾಜ್ಯದಲ್ಲಿ ಮೂಲ ಪ್ರಾಯವಾದ ಕೋಶ ಇದ್ದರೆ ಅದರಲ್ಲಿಯೂ ಇದು ತುಂಬಿದ್ದರೆ ಆ ರಾಜ್ಯದ ಆಡಳಿತ ಸೂತ್ರ ಚನ್ನಾಗಿ ನಡೆಯುತ್ತದೆ. ಇದನ್ನು ರಾಜಭಂಡಾರವೆಂದು ಕರೆಯಲಾಗಿದೆ. ಈ ದಿನವು ಸಹಾ ಟ್ರಜರಿ ಇರುವುದನ್ನು ನಾವಿಲ್ಲಿ ಸ್ಮರಿಸಕೊಳ್ಳಬಹುದು. ಈ ಭಂಡಾರವು ಸಂಗ್ರಹಿಸಿದ ಹಣವನ್ನು ಭದ್ರವಾಗಿಟ್ಟು, ರಾಜಾಜ್ಞೆಯ ಮೂಲಕ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ವಿನಿಯೋಗಿಸುವ ಪರಿಪಾಠವಿತ್ತು. ಅಂದರೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕೃಷಿಕ, ಕೈಗಾರಿಕ, ಸೈನ್ಯದ ಯೋಗಕ್ಷೇಮ,

ಗ್ರಾಮಾಭಿವೃದ್ಧಿ, ಅಧಿಕಾರಿಗಳ ವೇತನ ದಾನ, ಧರ್ಮ, ಮತ್ತಿತರ ಎಲ್ಲಾ ಖರ್ಚುಗಳು ಈ ಕೋಶದ ಮೂಲಕವೇ ನಡೆಯುತ್ತಿದ್ದವು, 'ಕೋಶಾಧಿ ಸಂಪರಣ' ಅಂದರೆ ಈ ದಿನದ 'ಬಜೆಟ್' ಅಂದರೆ ಖರ್ಚು ಮತ್ತು ಆದಾಯ ಸರಿದೂಗುವಂತೆ ನೋಡಿಕೊಳ್ಳುವುದು. ತೆರಿಗೆ ಸಂಗ್ರಹವನ್ನು ನ್ಯಾಯಬದ್ಧವಾಗಿ ಮಾಡಿ ಕೋಶ ಬರಿದಾಗದಂತೆ ಹಾಗೂ ಇದರಲ್ಲಿ ಎಷ್ಟು ಹಣ ಇದೆ ಎಂಬ ರಹಸ್ಯವನ್ನು ಪ್ರಜೆಗಳಿಗೆ ತಿಳಿಸಬಾರದು ಹಾಗೂ ಹಿಂಸೆಯಿಂದ ಕರ ವಸೂಲಿ ಮಾಡುವುದನ್ನು ತಿರಸ್ಕರಿಸಿದ್ದಾನೆ. ವಿದ್ಯಾಪೀಠಗಳು, ಧರ್ಮಸಂಸ್ಥೆಗಳು. ಸಾಧುಗಳು, ಮಠಗಳು ಕರವನ್ನು ನೀಡುವಾಗಿರಲಿಲ್ಲ, ಹಾಗೂ ದೇಶದಲ್ಲಿ ಧಾರಿದ್ರ್ಯ ಬಂದಾಗ, ವಿಪತ್ತು ಒದಗಿದಾಗ, ಹೆಂಗಸರು, ವ್ಯಾಧಿಗ್ರಸ್ತರು ಕುರುಡರು, ಕುಂಟರು ಅಂಗವಿಕಲರಿಂದ ಕರ ವಸೂಲಿಯನ್ನು ನಿಷಿದ್ಧಗೊಳಿಸಿದ್ದಾನೆ. ಭೂಮಿ, ಗಣಿ, ಅರಣ್ಯ ಮದಿರಾಸುರಾ ಗೃಹಗಳು ಆಮದು ರಫ್ತುಗಳ ಮೇಲೆ ಹೆಚ್ಚಿಗೆ ಕರ ಹೇರಿ ಕೋಶ ಯಾವಾಗಲು ತುಂಬಿರುವಂತೆ ನೋಡಿಕೊಳ್ಳಬೇಕಾಗಿತ್ತು.

। ಕೋಶ ಪೂರ್ವಾಃ ಸರ್ವಾರಂಭಾಃ (ಶ್ಯಾಮಶಾಸ್ತ್ರಿ) ಯಾವುದೇ ಕೆಲಸ ಆರಂಭವಾಗಬೇಕಾದರು ಸದಾ ಕೋಶ ತುಂಬಿರಬೇಕು. ರಾಜ್ಯದಲ್ಲಿ ಹಣ ಸೋರಿ ಹೋಗದಂತೆ ನೋಡಿಕೊಳ್ಳಬೇಕು. ಕೌಟಿಲ್ಯನ ಪ್ರಕಾರ ಹಣವನ್ನು ಹೆಚ್ಚು ಕಡಿಮೆ ಮಾಡುವ ಪದ್ಧತಿಯಲ್ಲಿ ಸುಮಾರು ನಲ್ವತ್ತು ಪ್ರಕಾರ ಗಳನ್ನು ವಿವರಿಸಿದ್ದಾನೆ. ಅಂದರೆ ಮೊದಲು ವಸೂಲಿ ಮಾಡಿದ್ದನ್ನು ಅನಂತರ ಬರೆಯುವುದು, ಹಿಂದುಗಡೆ ವಸೂಲಾ ಗಬೇಕಾದ್ದನ್ನು ಮೊದಲೇ ಬರೆದಿಡುವುದು ವಸೂಲಿ ಮಾಡಿದ್ದನ್ನು ಹೆಚ್ಚು ಕಡಿಮೆ ಮಾಡಿ ರಶೀತಿ ಹಾಕುವುದು

ಮುಂತಾದವು. ಇದನ್ನು 'ಕ್ರಮ ವ್ಯತ್ಯಾಸ ಸಂಯೋಗ' ಎಂದು ಕರೆದಿದ್ದಾನೆ. ಈ ಪರಿಸ್ಥಿತಿಯಲ್ಲಿ ಭಂಡಾಗಾರಾಧಿಪತಿ, ಲೆಕ್ಕಿಗ, ಹಣ ಕೊಡುವವ, ಕೊಡಿಸುವವ, ಮಂತ್ರಿ ಮುಂತಾದವರನ್ನು ಪ್ರಶ್ನಿಸಬೇಕು. ಅಪರಾಧ ಸಿದ್ಧವಾದಲ್ಲಿ, ಅದಕ್ಕೆ ತಕ್ಕಂತೆ ದಂಡ ಹಾಗೂ ಅಪರಾಧಿಯನ್ನು ಪತ್ತೆ ಹಚ್ಚಿದ ಮೇಲೆ ಅವನಿಂದ ಯಾರು, ಯಾರು ವಂಚಿತರಾಗಿರುವರೋ ಅವರೆಲ್ಲ ಬಂದು ತಿಳಿಸಿರಿ ಎಂದು ಡಂಗೂರ ಸಾರಬೇಕು, ಆರೋಪ ಸಿದ್ಧವಾದರೆ ದೇಹ ದಂಡ, ಹಿರಣ್ಯ ದಂಡ, ವಧ ದಂಡವನ್ನು ವಿಧಿಸುವ ಪದ್ಧತಿ ರೂಢಿಯಲ್ಲಿತ್ತು.

ಖ) ಮಿತ್ರ (ಅಂತರ ರಾಷ್ಟ್ರೀಯ ಸಂಬಂಧ)

ರಾಷ್ಟ್ರವು ಪ್ರಬಲವಾಗಿರಬೇಕಾದರೆ ಪರರಾಷ್ಟ್ರ ಹಾಗೂ ನೆರೆಹೊರೆಯ ರಾಷ್ಟ್ರಗಳ ಜೊತೆಯಲ್ಲಿ ಮಿತ್ರತ್ವವನ್ನು ಹೊಂದಿರಬೇಕು ಮತ್ತು ತಾಟಸ್ಥ್ಯ ನೀತಿಯನ್ನು ಹೊಂದಿದ್ದು ಶಾಂತಿ, ಸಂಧಾನ, ಸಮರ ಇವುಗಳ ಬಗೆಗೆ ವಿವೇಚಿಸಿ ತೀರ್ಮಾನ ಕೈಗೊಳ್ಳಬೇಕು. ಈ ದಿನದ ಅಂತರರಾಷ್ಟ್ರೀಯ ಸಂಬಂಧವನ್ನು ಇದಕ್ಕೆ ಹೋಲಿಸಬಹುದು.

ಕೌಟಿಲ್ಯನ ಪ್ರಕಾರ ಪರ ರಾಷ್ಟ್ರಗಳ ಸಂಬಂಧ ನಾಲ್ಕು ವಿಧ. ನೆರೆಯ ರಾಜನೊಡನೆ ಸ್ನೇಹದಿಂದ ವರ್ತಿಸುವವನು ಮಿತ್ರ, ಪ್ರಕಟವಾದ ಶತ್ರುತ್ವವನ್ನು ತೋರಿಸುವವನು ಸಹಜ ಶತ್ರು, ಶತ್ರುತ್ವದ ಸೂಚನೆಯನ್ನು ಕೊಡದೆ ಆಕ್ರಮಣ ನಡೆಸುವವನು ಕೃತ್ರಿಮ ಶತ್ರು. ಎರಡು ರಾಷ್ಟ್ರಗಳ ನಡುವೆ ಇದ್ದು ಯಾರಿಗೂ ಸಹಾಯ ಮಾಡುವುದಕ್ಕೆ ಇಷ್ಟಪಡದಿರುವವನು ಉದಾಸಿನ ಇದನ್ನು ಮಂಡಲ ಎಂದು ಕರೆಯಲಾಗಿದೆ.

ಈ ಮಂಡಲದೊಳಗಿನ ರಾಜ್ಯಗಳು ವಿಜಗೀಷು, ಸಂಧಿ, ವಿಗ್ರಹ, ಯುದ್ಧ, ಸಹಾಯ, ಏನನ್ನೂ ಬಯಸಿದರೂ ಶಾಸನ ಬದ್ಧವಾಗಿರಬೇಕು. ರಾಜ್ಯದ ಯೋಗಕ್ಷೇಮ ಶಮ, ದಮಗಳ ಮೇಲೆ ನಿಂತಿವೆ. ಆದ್ದರಿಂದ ರಾಜನು ಷಾಡ್ಗುಣ್ಯ ಧೋರಣೆ ಯನ್ನು ಅನುಸರಿಸಿ ಅದರ ಮೂಲಕ ತನ್ನ ರಾಜ್ಯ ಮತ್ತು ಪ್ರಜೆಗಳನ್ನು ಕಾಪಾಡಬೇಕು. ಷಾಡ್ಗುಣ್ಯಗಳೆಂದರೆ ಸಂಧಿ, ವಿಗ್ರಹ, ಆಸನ, ಯಾನ, ದ್ವೈದಿಭಾವ ಮತ್ತು ಸಂಶ್ರಯ.

ಆಡಳಿತ ಕ್ರಮಬದ್ಧತೆ

ಆಡಳಿತ ಎಂದರೆ ಸೇವೆ ಮಾಡು ಎಂದರ್ಥ. ಇದಿಲ್ಲದೆ ಹೋದರೆ ಯಾವುದೇ ರಾಜ್ಯ ತನ್ನ ಸದುದ್ದೇಶವನ್ನು ಪೂರ್ಣ ಗೊಳಿಸಲಾರದು. ರಾಜನೊಬ್ಬನೆ ದೇಶದ ಆಡಳಿತ ಸೂತ್ರವನ್ನು ಹಿಡಿದು ಅದನ್ನು ನಿರ್ವಹಿಸುವುದು ಸುಲಭವಲ್ಲವಾದ್ದರಿಂದ ಮಂತ್ರಿಗಳನ್ನು, ಆಡಳಿತಗಾರರನ್ನು ತನ್ನ ಸಹಾಯಕ್ಕಾಗಿ ಆರಿಸಿ ಕೊಳ್ಳಬೇಕಾಗಿತ್ತು. ಕೌಟಿಲ್ಯನ ಪ್ರಕಾರ 18 ಆಡಳಿತ ಶಾಖೆ ಗಳಿದ್ದು ಒಬ್ಬೊಬ್ಬರಿಗೆ ಒಂದೊಂದು ಖಾತೆಯನ್ನು ನೀಡ ಲಾಗಿದ್ದು ಅವರು ಸ್ವತಂತ್ರವಾಗಿ ಸಮಸ್ತ ಆಡಳಿತವನ್ನು ನಡೆಸು ತ್ತಿದ್ದರು. ಅವರುಗಳನ್ನು ಅಷ್ಟಾದಶತೀರ್ಥರೆಂದು ಹೆಸರಿಸಿ ದ್ದಾನೆ. ಒಟ್ಟಾರೆ ಒಂದು ದೇಶಕ್ಕೆ ಆಡಳಿತ ಮುಖ್ಯ. ಇದು ಕೆಟ್ಟರೆ ದೇಶದ ಪ್ರಗತಿ ಪತನವಾಗಿ ಅಲ್ಲಿಯ ಪ್ರಜೆಗಳು ಸಂಕಷ್ಟ ಕ್ಕೀಡಾಗಿ ಯಾತನೆಯ ಕೂಪದಲ್ಲಿ ಮುಳುಗಿ ಜೀವನ ನರಕವಾಗು ವುದರಲ್ಲಿ ಯಾವ ಸಂದೇಹವು ಇರುವುದಿಲ್ಲ. ಆಡಳಿತದ ಬಿಗಿಯು ಕುದುರೆಯ ಕಡಿವಾಣಕ್ಕೆ ಸಮ. ಕುದುರೆಗೆ ಸರಿಯಾದ ಕಡಿವಾಣ ವಿಲ್ಲದಿದ್ದರೆ ಅದು ತನ್ನ ಇಷ್ಟಬಂದಂತೆ ಚಲಿಸುತ್ತದೆಯೇ ವಿನಾ ಸವಾರನ ಇಷ್ಟಕ್ಕೆ ತಕ್ಕಂತೆ ನಡೆಯಲಾರದು. ರಾಷ್ಟ್ರವು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದುವರಿಯಬೇಕಾದರೆ ಅಲ್ಲಿಯ ಆಡಳಿತ ಹಾಗೂ ಆಡಳಿತಗಾರರು ಸರಿಯಾಗಿ ಇರಬೇಕು. ಇಲ್ಲವಾದರೆ ದೇಶದ ಸಂಪತ್ತಾದಿಯಾಗಿ ಸರ್ವನಾಶವಾಗುತ್ತದೆ. ಅಷ್ಟಾದಶ ತೀರ್ಥರುಗಳಲ್ಲಿಮುಖ್ಯರಾದವರುಗಳ ಬಗೆಗೆ ವಿಚಾರಮಾಡೋಣ.

1) ಪುರೋಹಿತ : ಪಟ್ಟಣಕ್ಕೆ ಹಿತವನ್ನು ಕೋರುವನು. ಧಾರ್ಮಿಕಾಧಿಕಾರಿ, ಧಾರ್ಮಿಕ ಕಾರ್ಯಗಳಾದ ಯಜ್ಞ, ಯಾಗ, ತಪ, ಮಂತ್ರ ಪಠಣೆ ಮುಂತಾದುವುಗಳಿಂದ ಪ್ರಕೃತಿಯಿಂದೊದಗುವ ವಿಪತ್ತನ್ನು ಪಾರುಮಾಡುವವನು. ವೈದಿಕ ಗ್ರಂಥಾಧಿಕಾರಿಯಾಗಿ ಉನ್ನತ ಕುಲದವನಾಗಿರುತ್ತಾನೆ.

2) ಮಂತ್ರಿ : ಇವನು ಪ್ರಜಾಪ್ರತಿನಿಧಿಯೂ, ಸಕಲಾಡಳಿತಾಧಿಕಾರಿಯೂ ಹಾಗು ಅರಸನ ಆತ್ಮೀಯನು, ರಾಜ್ಯದ ಏಳಿಗೆಗಾಗಿ ಪ್ರಜಾಸುಖಕ್ಕಾಗಿ ಹಗಲುರಾತ್ರಿ ದುಡಿಯುವಂತವನಾಗಿರುತ್ತಾನೆ.

3) ಸೇನಾಪತಿ : ಸೈನ್ಯದ ಮುಖ್ಯಸ್ಥನಾಗಿದ್ದು ರಾಜ್ಯ ಶತ್ರುವಶವಾಗದಂತೆ ರಾಜನನ್ನೂ ಪ್ರಜೆಗಳನ್ನೂ ಕಾಪಾಡುವ ಭಾರ ಇವನದು. ಆದರ ಜೊತೆಗೆ ಯುದ್ಧ ಸಿದ್ಧತೆ ಇವನಿಗೆ ಸೇರಿರುತ್ತದೆ.

4) ಯುವರಾಜ : ಅರಸನು ಸತ್ತನಂತರ ಪಟ್ಟಕ್ಕೇರಿಸುವರು. ಇವನು ಅಡ್ಡದಾರಿ ಹಿಡಿಯದಂತೆ, ಧರ್ಮದ್ರೋಹಿಯಾಗದಂತೆ ನೋಡಿಕೊಳ್ಳಬೇಕು. ಧರ್ಮಬುದ್ಧಿಯುಳ್ಳವನು, ಸುಸಂಸ್ಕಾರವುಳ್ಳವನು, ಬಲಿಷ್ಟನು, ಗುಣಾಢ್ಯನು, ತೇಜಸ್ವಿಯು ಆಗಿರಬೇಕು.

5) ದೌವಾರಿಕ ಮತ್ತು 6) ಅಂತರ್ವಂಶಿಕ : ಇವರು ರಾಜನ ಅಂತರಂಗ ಕಾರ್ಯಗಳನ್ನು ಅರಮನೆಯಲ್ಲಿರುವ ಕೆಲಸಗಾರರ ಹಾಗೂ ನಿವಾಸಿಗಳ ಮೇಲ್ವಿಚಾರಕರಾಗಿರುತ್ತಾರೆ.

7) ಸಮೂಹತ್ರ : ಜನಪದದ ಅಧಿಕಾರಿ. ಆಯ-ವ್ಯಯ ಗಳಿಕೆ ಉಳಿಕೆಗಳನ್ನು ನೋಡಿಕೊಂಡು ಗಳಿಕೆಯನ್ನು ಹೆಚ್ಚಿಸಿ ಜನರನ್ನು ಸಂತುಷ್ಟಗೊಳಿಸುವುದು. ಇವನ ಸಹಾಯಕ್ಕಾಗಿ ಸ್ಥಾನಿಕ, ಗೋಪ ಅಧಿಕಾರಿಗಳಿರುತ್ತಾರೆ.

8) ಸನ್ನಿಧಾತೃವು : ರಾಜ್ಯದ ಸಂಗ್ರಹಾಲಯಗಳ, ಉಗ್ರಾಣಗಳ ಮೇಲಧಿಕಾರಿ. ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತಾನೆ.

9) ದಂಡಪಾಲನು : ರಾಜ್ಯದೊಳಗಡೆ ಯಾರಾದರು ತಪ್ಪುಮಾಡಿದರೆ ಅದಕ್ಕೆ ತಕ್ಕಂತೆ ಶಿಕ್ಷೆ ವಿಧಿಸಿ ಅವರನ್ನು ದಾರಿಗೆ ತರುವ ಅಧಿಕಾರಿ.

10) ದುರ್ಗಪಾಲನು : ದುರ್ಗವು ಶತ್ರುಗಳ ವಶವಾಗ ದಂತೆ ಹಾಗೂ ಕಳ್ಳಕಾಕರ ಭಯವಿಲ್ಲದಂತೆ ನೋಡಿಕೊಳ್ಳುವುದು. ರಾಜ್ಯದ ಪ್ರತಿಯೊಂದು ಆಡಳಿತವು ಇವನ ಮೂಲಕವೆ ನಡೆಯುತ್ತದೆ. 11) ದಂಡಪಾಲ 12) ಪ್ರಶಾಸ್ತೃ 13) ಪ್ರದೇಷ್ಟ್ರ 14) ನಾಯಕ 15) ಪೌರವ್ಯವಹಾರಿಕ 16) ಕರ್ಮಾಂತಿಕ 17) ಅಂತಪಾಲ 18) ಆಟವಿಕ.

ಹೀಗೆ ಇವರುಗಳಿದ್ದು ಒಬ್ಬೊಬ್ಬರು ಒಂದು ಖಾತೆಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಈ ದಿನವು ಸಹಾ ಮಂತ್ರಿ ಗಳಿದ್ದರೂ ಕೂಡ ಆಯಾ ಇಲಾಖೆಗೆ ಸಂಬಂಧಪಟ್ಟಹಾಗೆ ಅಧಿಕಾರಿಗಳಿರುವುದನ್ನು ಗಮನಿಸಬಹುದಾಗಿದೆ.

ಈ ದಿನ ಹೇಗೆ ಮಂಡಲಿಗಳಿದ್ದು ಅವುಗಳಿಗೆ ಒಬ್ಬೊಬ್ಬ ಅಧ್ಯಕ್ಷರುಗಳು ಇರುವ ಹಾಗೆ ಆದಿನವು ಕೂಡ ಅಧ್ಯಕ್ಷರುಗಳಿದ್ದರು. ಅವರುಗಳೆಂದರೆ,

ವಾಣಿಜ್ಯ ವ್ಯವಹಾರಧ್ಯಕ್ಷ ಅಥವಾ ಪಣ್ಯಾಧಕ್ಷ

ರಾಜ್ಯದೊಳಗಡೆ ಮಾರಾಟವಾಗುವ ಸರಕುಗಳು, ಧಾನ್ಯ, ಆಳತೆ-ತೂಕ ವಿದೇಶಿ ವ್ಯಾಪಾರದ ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿ.

ಶುಲ್ಕಾಧ್ಯಕ್ಷ: ಸುಂಕದ ಅಧಿಕಾರಿ, ಇದನ್ನು ವಸೂಲಿ ಮಾಡಿ, ಎಲ್ಲಾ ಸರಕುಗಳಿಗೂ ರಾಜಮುದ್ರೆಯನ್ನು ಇವನು ನೀಡಬೇಕಿತ್ತು. ಧರ್ಮಕಾರ್ಯ, ಮದುವೆ ಮುಂಜಿ, ಹೆಂಗಸರ ಒಡವೆ ಹಾಗೂ ತವರೂರಿನಿಂದ ತಂದ ವಸ್ತುಗಳಿಗೆ ಸುಂಕ ವಿರಲಿಲ್ಲ.

ನಗರಾಧ್ಯಕ್ಷ: ರಾಜಧಾನಿಯ ಆಡಳಿತಾಧಿಕಾರಿ ಕಾರ್ಪೋರೇಷನ್ ಮಾಡುವ ಎಲ್ಲಾ ಕೆಲಸವನ್ನು ಇವನು ಮಾಡುತಿದ್ದ.

ಸುರಾಧ್ಯಕ್ಷ: ಮದ್ಯ ವ್ಯಾಪಾರದ ಮೇಲಾಧಿಕಾರಿ ಗಡಂಗುಗಳಿಗೆ ಪರವಾನಗಿ, ಗುತ್ತಿಗೆ, ತೆರೆಸುವುದು, ಮುಚ್ಚುವುದು ಇದರ ಬಳಕೆಗೆ ಇವನ ಅನುಮತಿ ಅವಶ್ಯಕವಾಗಿತ್ತು.

ಗಣಿಕಾಧ್ಯಕ್ಷ: ರೂಪವತಿಯರಿಗೆ ಕಲೆಯನ್ನು ನೀಡುವುದು ಅಂದರೆ ನೃತ್ಯ ಸಂಗೀತಕ್ಕೆ ಪ್ರೊತ್ಸಾಹ ನೀಡುವ ಕೆಲಸ ಇವನದಾಗಿತ್ತು.

ಸೀತಾಧ್ಯಕ್ಷ: ಕೃಷಿಗೆ ಸಂಬಂಧಪಟ್ಟದನ್ನು ಈತನೇ ನೋಡಿಕೊಳ್ಳುತ್ತಿದ್ದ. ಇದಕ್ಕೆ ಸಂಬಂಧಿಸಿದ ಹಾಗೆ ಎಲ್ಲಾ ಸೌಕರ್ಯವನ್ನು ಒದಗಿಸುವುದು. ಬೆಳೆಗಳಿಗೆ ಹಾನಿಯಾದರೆ ಅವುಗಳಿಗೆ ನಷ್ಟವನ್ನು ತುಂಬಿಕೊಡುವುದು. ಲೆವಿ ವಸೂಲಿ ಮಾಡುವುದು, ಮಾಫಿ ಮಾಡುವುದು ಇವನಿಗೆ ಸೇರಿತ್ತು.

ಗೋಧ್ಯಕ್ಷ: ದನಕರುಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿರುವರೇ ಎಂಬುದನ್ನು ಈತ ನೋಡಿಕೊಳ್ಳುತ್ತಿದ್ದ. ಅಂದರೆ ಈದಿನ ಪಶುಸಂಗೋಪನೆ ಇಲಾಖೆ ಮಾಡುವ ಕಾರ್ಯವನ್ನು ಈತ ನಿರ್ವಹಿಸುತಿದ್ದ.

ನಾವಾಧ್ಯಕ್ಷ: ಸಮುದ್ರ, ನದಿ, ಸರೋವರ, ನಾವೆ, ಹಡಗು ಮುಂತಾದ ಸಂಚಾರಗಳ ಮೇಲ್ವಿಚಾರಣೆ ಇವನದು. ಇಲ್ಲಿ ಸಿಗುವ ಬೆಲೆ ಬಾಳುವ ವಸ್ತುಗಳಿಗೆಲ್ಲಾ ಇವನದೆ ಅಂತಿಮ ಮಾತಾಗಿತ್ತು.

ಅಕ್ಷಪಟಲ ಅಧ್ಯಕ್ಷ: ಲೆಕ್ಕಪತ್ರದ ಕಛೇರಿ ಈದಿನದ ಅಕೌಂಟ್ಸ್‌ಜನರಲ್‌ನ ಕೆಲಸ.

ಕೋಶಸಂಗ್ರಹಾಧ್ಯಕ್ಷ: ಹ ಣ ಕಾ ಸಿ ನ ಮಂತ್ರಿಗಳು ಮಾಡುವ ಕೆಲಸ ಇವನದು. ಕೋಶ ಬರಿದಾದರೆ ಕರವಸೂಲಿ ಮಾಡಿ ಇದನ್ನು ಭರ್ತಿ ಮಾಡುವುದು ಅದರಲ್ಲಿಯೂ ಸಮೃದ್ಧ ಪ್ರಜೆಗಳಿಂದ, ಪ್ರದೇಶಗಳಿಂದ ಕರುಣೆ ತೋರದೆ ವಸೂಲಿ ಮಾಡಬೇಕೆಂದಿದ್ದಾನೆ.

'ತೋಟದಿಂದ ಕಳಿತ ಹಣ್ಣುಗಳನ್ನೇ ಕಿತ್ತುಕೊಳ್ಳುವಂತೆ ರಾಜ್ಯದಲ್ಲಿಯ ಅಧಾರ್ಮಿಕರ ಹಣವನ್ನು ಅಪಹರಿಸಬೇಕು. ಕಸಕು ಕಾಯಿಗಳನ್ನು ಬಿಟ್ಟುಬಿಡುವಂತೆ ಸಜ್ಜನರ ಹಣವನ್ನು ಮುಟ್ಟ ಬಾರದು (ಕೌಟಿಲ್ಯನ ಅರ್ಥಶಾಸ್ತ್ರ–ಪಿ. ಆರ್. ಕಾಂಗ್ಲೆ) ಹೀಗೆ ಇವರೆಲ್ಲರ ಮೂಲಕ ಆಡಳಿತ ನಡೆಯುತಿತ್ತು.

ಕೌಟಿಲ್ಯನಿಗೆ ಅಧಿಕಾರಿಗಳ ಬಗೆಗೆ ಒಳ್ಳೆಯ ಅಭಿಪ್ರಾಯ ವಿರಲಿಲ್ಲ, ಅವನ ಪ್ರಕಾರ ಅಧಿಕಾರಿಗಳು ಭ್ರಷ್ಟಾಚಾರಿಗಳು ಮತ್ತು ಲಂಚಕೋರರು, ಮನುಷ್ಯನ ಸ್ವಭಾವವನ್ನು ಕುದುರೆಗೆ ಹೋಲಿಸಿದ್ದಾನೆ. ಇವರಿಗೆ ಅಧಿಕಾರವಿದ್ದರೆ ಅಡ್ಡದಾರಿ ಹಿಡಿದು ಹಣವನ್ನು ಬಿಡರು ಇವರಲ್ಲಿ ಹೊಟ್ಟೆಕಿಚ್ಚು, ದ್ವೇಷ, ಅಸೂಯೆ, ಒಳಜಗಳ ಬೆಳದು ಆಡಳಿತ ಸರಿಯಾಗಿ ನಡೆಯುದಂತೆ ಮಾಡುವರು ಆದ್ದರಿಂದ ಇವರನ್ನು ಆಯ್ಕೆ ಮಾಡುವಾಗ ನಾನಾ ಪರೀಕ್ಷೆಗಳಿಗೆ ಒಳಪಡಿಸಬೇಕೆಂದಿದ್ದಾನೆ.

ಅಪ್ರಮಾಣಿಕತನ, ಲಂಚಗುಳಿತನ, ಲೆಕ್ಕಪತ್ರದಲ್ಲಿ ವ್ಯತ್ಯಾಸ ಮಾಡುವುದು, ಸಂಖ್ಯೆಯ ಮುಂದೆ ಸೊನ್ನೆ ಸೇರಿಸು ವುದು, ಆಡಳಿತದಲ್ಲಿ ಹಿಂದಿನಿಂದ ಇಂದಿನವರೆವಿಗೂ ಬಂದಿದೆ ಮುಂದೆಯು ಇರುತ್ತದೆ. "ನಾಲಿಗೆಯ ತುದಿಯಲ್ಲಿದ್ದ ಜೇನ ಹನಿಯನ್ನು ನುಂಗದೆ ಬಿಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಹಣಕಾಸಿನ ವ್ಯವಹಾರದಲ್ಲಿ ತೊಡಗಿದವನು ಹಣ ವನ್ನು ನುಂಗದೆ ಬಿಡನು".

ವಿದೇಶಾಂಗ ನೀತಿ ಮತ್ತು ವ್ಯವಸ್ಥೆ

ಇವನ ಈ ನೀತಿಯು ಸವಿಸ್ತಾರವಾಗಿ ಸುಂದರವಾಗಿ ಸರಳವಾಗಿದ್ದು ಈ ದಿನವು ಸಹ ಅನುಷ್ಠಾನದಲ್ಲಿರುವುದನ್ನು ಕಾಣಬಹುದು. ಇದರಲ್ಲಿ ಎರಡು ಪ್ರಮುಖ ಭಾಗಗಳಿವೆ ಅವುಗಳೆಂದರೆ :

1) ಯುದ್ಧ ಕಾಲದ ವಿದೇಶಾಂಗ ನೀತಿ

2) ಶಾಂತಿ ಕಾಲದ ವಿದೇಶಾಂಗ ನೀತಿ

ಈ ಎರಡು ಭಾಗಗಳು ಮೂರು ಪ್ರಮುಖ ಸಿದ್ಧಾಂತ ಗಳನ್ನು ಒಳಗೊಂಡಿವೆ.

1 ಮಂಡಲ ಸಿದ್ಧಾಂತ

2 ಷಾಡ್ಗುಣ್ಯ ಸಿದ್ಧಾಂತ

3 ರಾಯ ಭಾರತ್ವದ ವಿವಿಧ ವಿಧಾನಗಳು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶಕ್ತಿಗೆ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಹೆಚ್ಚಿನ ಸ್ಥಾನಮಾನ ನೀಡಿದ್ದಾನೆ. ಇಲ್ಲಿ ಶಕ್ತಿ ಯೆಂದರೆ ಆರ್ಥಿಕ, ಸಾಮಾಜಿಕ, ನೈತಿಕ ಬಲವೆಂದು ಇವುಗಳ ಮೂಲಕ ಶತ್ರುಗಳು ಮೇಲು ಮಟ್ಟಕ್ಕೆ ಬರದಂತೆ ನೋಡಿ ಕೊಳ್ಳಬೇಕು. ಒಬ್ಬ ರಾಜ ಶಕ್ತಿಹೀನನಾಗಿದ್ದರೆ ಬೇರೆ ರಾಜರ

ಜೊತೆಯಲ್ಲಿ ಸಮಾನತೆಯನ್ನು ಗಳಿಸಿಕೊಳ್ಳಲು ಯತ್ನಿಸಬೇಕು. "ನೀನು ಬಲಹೀನನಾದರೆ ಮೊದಲು ಬೇರೆಯುವರೊಂದಿಗೆ ನೀನು ಸರಿಸಮನಾಗಲು ಪ್ರಯತ್ನಿಸು (ಕೌಟಿಲ್ಯನ ಅರ್ಥಶಾಸ್ತ್ರ-ಕೆ. ಕೃಷ್ಣಭಟ್ಟ) ಇಡೀ ವಿದೇಶಾಂಗ ನೀತಿಯನ್ನು ವಿಜಿಗಿಷುವಿನ ಸುತ್ತ ಹೆಣೆದಿದ್ದಾನೆ 'ವಿಜಿಗಿಷು' ಅಂದರೆ ಎಲ್ಲಾ ಸಾಮಂತರನ್ನು ಜಯಿಸಿ ತನ್ನ ಸಾಮ್ರಾಜ್ಯವನ್ನು ಯಾರು ಸ್ಥಾಪಿಸಿಕೊಳ್ಳುವನೋ ಅವನೇ ವಿಜಿಗಿಷು.

ಮಂಡಲ ಸಿದ್ಧಾಂತ

ಇದು ಒಂದು ಚಕ್ರದಂತಿದ್ದು, ಒಂದು ದೇಶವನ್ನು ಅನೇಕ ಸಣ್ಣ ಸಣ್ಣ ಪ್ರಾಂತಗಳಾಗಿ ವಿಭಜಿಸಿ, ಇವುಗಳೆಲ್ಲಕ್ಕೂ ಒಬ್ಬನೇ ಮುಖಂಡನಿದ್ದು ಮಹತ್ವಾಕಾಂಕ್ಷಿ ಯಾಗಿರುತ್ತಾನೆ ಅವನೇ ವಿಜಿಗಿಷು. ಎಲ್ಲಾ ರಾಜ್ಯಗಳ ಆಡಳಿತ ಇವನಿಗಿದ್ದು ಪ್ರತಿ ಯೊಂದು ದೇಶವು ತಾನು ಬಲಶಾಲಿಯಾಗಲು ಹೆಚ್ಚು ಪ್ರಭಾವ ಬೀರಲು ಯತ್ನಿಸುತ್ತದೆ. ಜೊತೆಗೆ ಬೇರೆ ರಾಜ್ಯಗಳು ಹೆಚ್ಚು ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು. ವಿದೇಶಾಂಗ ನೀತಿಯು ಒಂದು ದೇಶದ ಭೌಗಳಿಕ ಅಂಶವನ್ನು ಅನುಸರಿಸಿ ಆದರ ಮೂಲಕ ಪರಸ್ಪರ ರಾಷ್ಟ್ರಗಳ ಸಂಬಂಧವನ್ನು ಆವುಗಳ ಅಸ್ತಿತ್ವವನ್ನು ವಿಚಾರ ಮಾಡಿದ್ದಾನೆ. ಇವನ ಪ್ರಕಾರ ಹತ್ತಿರದ ರಾಷ್ಟ್ರಗಳು ಮಿತ್ರತ್ವದಿಂದ ಕೂಡಿರುತ್ತವೆ. ಹಾಗೂ ಒಂದೇ ವೈರಿಯನ್ನು ಹೊಂದಿರುವ ಎರಡು ರಾಷ್ಟ್ರಗಳು ಸಮಾನವಾಗಿ ಸ್ನೇಹಿತರಾಗಿರುತ್ತಾರೆ. ಇದು ಕೇವಲ ಪ್ರಾಚೀನ ಕಾಲಕ್ಕೆ ಅನ್ವಯಿಸದೆ ಈ ದಿನಕ್ಕೂ ಸಹ ಅನ್ವಯುವಾಗುತ್ತವೆ. ಉದಾ: ಪಾಕಿಸ್ತಾನ ಮತ್ತು ಭಾರತ, ಭಾರತ ಮತ್ತು ಚೀನಾ ಇವು ಪರಸ್ಪರ ವೈರಿ ರಾಷ್ಟ್ರಗಳು, ಜೊತೆಗೆ ಚೀನಾ ಮತ್ತು ಪಾಕಿಸ್ಥಾನ ಮಿತ್ರ ರಾಷ್ಟ್ರಗಳಾಗಿವೆ.

ಮಂಡಲ ಸಿದ್ಧಾಂತದಲ್ಲಿ ಬರುವ ರಾಜ್ಯಗಳು

ಇವನು 12 ರಾಜ್ಯಗಳನ್ನು ಆಧಾರವಾಗಿಟ್ಟುಕೊಂಡು ಈ ಮಂಡಲವನ್ನು ಪ್ರತಿಪಾದಿಸಿದ್ದಾನೆ. ಆದರೆ ಇಲ್ಲಿ ಬರುವ ರಾಜ್ಯಗಳ ಸಂಖ್ಯೆಯನ್ನು ನಿರ್ಧಿಷ್ಟವಾಗಿ ಗೊತ್ತುಪಡಿಸಿಲ್ಲ. ಇಲ್ಲಿ 12 ರಾಜರು ಪ್ರಕೃತಿ ರಾಜರೆಂದೆನಿಸುವರು ಅವುಗಳನ್ನು ಸಂಕ್ಷಿಪ್ತವಾಗಿ ನೋಡೋಣ.

1) ವಿಜಿಗಿಷು 2) ಅರಿ 3) ಮಿತ್ರ 4) ಅರಿಮಿತ್ರ
5) ಮಿತ್ರ-ಮಿತ್ರ 6) ಪಾರ್ಶ್ವನಿಗ್ರಹ 7) ಆಕ್ರಂದ
8) ಪಾರ್ಶ್ವನಿಗ್ರಹಸಾರ 9) ಆಕ್ರಂದಸಾರ 10) ಮಧ್ಯಮ
11) ಉದಾಸೀನಾ 12) ಅರಿಮಿತ್ರ-ಮಿತ್ರ.

1) ವಿಜಿಗಿಷು : ಇಡೀ ರಾಜ್ಯ ಮಂಡಲದ ಕೇಂದ್ರ ವ್ಯಕ್ತಿ. ಎಲ್ಲಾ ರಾಜ್ಯಗಳನ್ನು ಇವನ ಅಧೀನದಲ್ಲಿಟ್ಟುಕೊಳ್ಳಲು ಇಚ್ಛಿಸುವುದರ ಜೊತೆಗೆ ಯಾವುದೇ ಸಾಮಂತ ರಾಜರು ಸ್ವತಂತ್ರ ರಾಗಲು ಬಿಟ್ಟುಕೊಡುವುದಿಲ್ಲ. ಇವನು ಸರ್ವಾಧಿಕಾರಿಯಂತೆ ತನ್ನದೇ ಯಾದ ಪ್ರಭಾವವನ್ನು ರೂಪಿಸಿಕೊಳ್ಳಲು ಬಯಸು ತ್ತಾನೆ.

2) ಅರಿ : ವಿಜಿಗಿಷುವಿನ ವೈರಿ ಹಾಗೂ ಪಕ್ಕದ ರಾಷ್ಟ್ರ ಇದು ಬೆಳೆಯದಂತೆ ವಿಜಿಗಿಷು ಎಚ್ಚರ ವಹಿಸುತ್ತಾನೆ.

3) ಮಿತ್ರ : ಅರಿಯ ನಂತರ ಬರುವ ರಾಜ್ಯ. ಇಲ್ಲಿ ವಿಜಿಗಿಷು ಮತ್ತು ಮಿತ್ರರು ಸ್ನೇಹಿತರಾಗಿದ್ದು. ಸಹಕಾರ ಮನೋಭಾವ ಉಳ್ಳವರಾಗಿ ಅರಿಗೆ ಮಿತ್ರ ಶತ್ರು ವಾಗಿರುವುದ ರಿಂದ ವಿಜಿಗಿಷುವಿಗೆ ಇವನು ಮಿತ್ರನಾಗಿ ಸಮಯ ಬಂದಾಗ ಇವರಿಬ್ಬರು ಒಂದಾಗಿ ಭೂ ಕ್ಷೇತ್ರದ ಮೇಲೆ ಬರಲು ಯತ್ನಿಸು ತ್ತಾರೆ.

4) ಅರಿಮಿತ್ರ : ಮಿತ್ರನಕ್ಷೇತ್ರದ ಹತ್ತಿರ ರಾಜ್ಯ. ಇದು ಅರಿಗೆ ಸ್ನೇಹಿತನಾಗಿದ್ದು ಸಾಮಾನ್ಯವಾಗಿ ಮಿತ್ರ ಮತ್ತು ವಿಜಿಗಿಷುರವರಿಗೆ ಶತ್ರು ಅರಿ ಮತ್ತು ಅರಿ ಮಿತ್ರ ಇಬ್ಬರೂ ಕೂಡಿ ತಮ್ಮದೇಯಾದ ಕೇಂದ್ರವನ್ನು ಸ್ಥಾಪಿಸಿ ತಮ್ಮ ತಮ್ಮಲ್ಲೆ ಒಪ್ಪಂದ ಮಾಡಿಕೊಳ್ಳುತ್ತಾರೆ.

5) ಮಿತ್ರ-ಮಿತ್ರ : ಅರಿಮಿತ್ರನ ಭೂ ಕ್ಷೇತ್ರದ ಮೇಲೆ ಬರುವ ರಾಜ್ಯ. ಅರಿ ಮತ್ತು ಅರಿ ಮಿತ್ರನಿಗೆ ಇದು ಶತ್ರುವಾಗಿದ್ದು ವಿಜಿಗಿಷುವಿನ ಸ್ನೇಹಿತ ರಾಷ್ಟ್ರವಾದ ಮಿತ್ರನ ಜೊತೆ ಒಳ್ಳೆಯ ಸಂಬಂಧವನಿಟ್ಟುಕೊಂಡಿರುತ್ತದೆ.

6) ಪಾರ್ಶ್ವನಿಗ್ರಹ : ವಿಜಿಗಿಷುವಿನ ಭೂ ಪ್ರದೇಶದಲ್ಲಿ ಬರುವುದೇ ಪಾರ್ಶ್ವನಿಗ್ರಹ. ಇದು ವಿಜಿಗಿಷುವಿಗೆ ಶತ್ರುವಾಗಿದ್ದು ಸಮಯ ಬಂದಾಗ ವಿಜಿಗಿಷುವಿನ ಮೇಲೆ ಹಿಂಬಂದಿಯಿಂದ ಆಕ್ರ ಮಣ ಮಾಡಲು ಪ್ರಯತ್ನಿಸುತ್ತದೆ.

7) ಅರಿಮಿತ್ರ-ಮಿತ್ರ ; ಇದು ಮಿತ್ರ ಮಿತ್ರನ ಭೂ ಪ್ರದೇಶದ ರಾಜ್ಯದ ಮೇಲೆ ಬರುತ್ತಿದ್ದು, ಅರಿಮಿತ್ರನ ಸ್ನೇಹಿತ ರಾಷ್ಟ್ರವಾಗಿರುತ್ತದೆ. ಇದು ಸದಾ ವಿಜಿಗಿಷುವಿಗೆ ಶತ್ರುವಾಗಿರು ತ್ತದೆ.

8) ಆಕ್ರಂದ : ಪಾರ್ಶ್ವನಿಗ್ರಹ ರಾಜ್ಯದ ಕೆಳಗೆ ಇದು ಬರುತ್ತದೆ. ಇದು ಪಾರ್ಶ್ವನಿಗ್ರಹ ರಾಜ್ಯಕ್ಕೆ ಶತ್ರುವಾಗಿದ್ದು ವಿಜಿಗಿಷುವಿಗೆ ಮಿತ್ರ ರಾಷ್ಟ್ರವಾಗಿದೆ.

9) ಪಾರ್ಶ್ವನಿಗ್ರಹಸಾರ : ಆಕ್ರಂದ ರಾಜ್ಯದ ಕೆಳಭಾಗದಲ್ಲಿ ಬರುವದು. ಪಾರ್ಶ್ವನಿಗ್ರಹಕ್ಕೆ ಮಿತ್ರನಾಗಿದ್ದು ವಿಜಿಗಿಷು ಮತ್ತು ಅದರ ಮಿತ್ರ ರಾಷ್ಟ್ರಗಳಿಗೆ ಶತ್ರು ರಾಷ್ಟ್ರವಾಗಿರುತ್ತದೆ.

10) ಆಕ್ರಂದಸಾರ : ಆಕ್ರಂದ ರಾಜ್ಯಕ್ಕೆ ಮಿತ್ರನಾಗಿದ್ದು ವಿಜಿಗಿಷುವಿಗೆ ತನ್ನ ಬೆಂಬಲ ನೀಡುತ್ತದೆ. ಹಾಗೂ ಪಾರ್ಶ್ವನಿಗ್ರಹ ರಾಷ್ಟ್ರಕ್ಕೆ ಶತ್ರುವಾಗಿ ಪರಿಣಮಿಸಿದೆ.

11) ಮಧ್ಯಮ : ವಿಜಿಗಿಷು ಮತ್ತು ಅರಿ ರಾಜ್ಯದ ಎರಡೂ ಭೂ ಪ್ರದೇಶಕ್ಕೆ ತಾಗಿರುವಂತೆ ತನ್ನ ಭೂ ಪ್ರದೇಶವನ್ನು ಹೊಂದಿದ್ದು ಅದರ ಜೊತೆಗೆ ವಿಜಿಗಿಷು ಮತ್ತು ಅರಿಗಿಂತ ಬಲಿಷ್ಟವಾಗಿದ್ದು ಸ್ವಾತಂತ್ರತೆಯನ್ನು ಪಡೆದುಕೊಂಡು ಅದನ್ನು ಕಾಪಾಡಿಕೊಂಡು ಹೋಗುವಂತದ್ದಾಗಿದೆ.

12) ಉದಾಸೀನಾ : ಎಂದರೆ ಉಳಿದ 11 ರಾಜ್ಯಗಳಿಗಿಂತ ದೂರದಲ್ಲಿದ್ದು ಭೌಗೋಳಿಕ ಸಂಬಂಧವನ್ನು ಹೊಂದಿಲ್ಲದೆ, ವಿಜಿಗಿಷು, ಅರಿ ಹಾಗೂ ಮತ್ತಿತರ ರಾಷ್ಟ್ರಗಳಿಗಿಂತ ಅನೇಕ ವಿಚಾರಗಳಲ್ಲಿ ಇದು ಬಲಶಾಲಿಯಾಗಿರುತ್ತದೆ.

ಈ ಸಿದ್ಧಾಂತದ ಅನೇಕ ವಿಷಯ-ವಸ್ತುಗಳು ಈ ದಿನದ ಆಧುನಿಕ ವಿದೇಶಾಂಗ ನೀತಿಗೆ ಸ್ಪಂದಿಸುವಂತದಾಗಿದ್ದು ರಾಜ್ಯಗಳು ಒಂದು ಬಲಿಷ್ಠ ಕೇಂದ್ರದಡಿಯಲ್ಲಿದ್ದು ತಮ್ಮದೇಯಾದ ಭೌಗಳಿಕ ಅಸ್ತಿತ್ವವನ್ನು ಹೊಂದಿರಬೇಕೆಂಬುದು ಇಲ್ಲಿ ಸ್ಪಷ್ಟ.

ಷಾಡ್ಗುಣ್ಯ ಸಿದ್ಧಾಂತ ಅಥವಾ ಷಡ್ಗುಣ್ಯ ಸಿದ್ಧಾಂತ

ಈ ಸಿದ್ಧಾಂತವನ್ನು ಕೌಟಿಲ್ಯನ ಮಾತಿನಲ್ಲೆ ನೋಡುವುದಾದರೆ ಶತ್ರುವಿಗಿಂತ ಬಲಹೀನನಾಗಿರುವಾಗ ಶತ್ರುವಿನೊಡನೆ ಸಂಧಿ ಮಾಡಿಕೊಳ್ಳಬೇಕು. ಶತ್ರುವಿಗಿಂತ ಬಲಶಾಲಿಯಾಗಿರುವಾಗ ವಿಗ್ರಹವನ್ನು ಕೈಗೊಳ್ಳಬೇಕು. ಶತ್ರುವನ್ನು ತಾನಾಗಲೀ ನಾಶಮಾಡಲು ಶಕ್ತರಾಗಿಲ್ಲವೆಂದು ತಿಳಿದಿರುವಾಗ ಆಸನವನ್ನು ಕೈಗೊಳ್ಳಬೇಕು. ಅಭಿಯಾಸ್ಯತ್ಕರ್ಮಾಧಿಕರಣದಲ್ಲಿ ಹೇಳಿದ ಶಕ್ತಿದೇಹಾದಿ ಗುಣಾತಿಶಯದಿಂದ ಕೂಡಿಕೊಂಡಿರುವಾಗ ಶತ್ರುವನ್ನಾಕ್ರಮಿಸಲು ಹೋಗಬೇಕು. ದುರ್ಬಲನಾಗಿರುವಾಗ ಪ್ರಬಲನಾದವನ್ನಾಶ್ರಯಿಸಬೇಕು. ಕಾರ್ಯಸಾಧನೆಗೆ ಸಹಾಯಾಪೇಕ್ಷೆಯಿರುವಾಗ ದ್ವೈಧೀ ಭಾವವನ್ನು ಕೈಗೊಳ್ಳಬೇಕು. ಈ ರೀತಿ ವಿಷಯ ಭೇದಗಳಿಂದ ಷಾಡ್ಗುಣ್ಯಗಳು ಸಂಕ್ಷೇಪವಾಗಿ ನಿರೂಪಿಸಲ್ಪಟ್ಟಿವೆ (ಅನು: ಕೆ. ಕೃಷ್ಣಭಟ್ಟ).

ಯಾವುದೇ ಒಂದು ದೇಶ ಅಭಿವೃದ್ಧಿಯ ಲಕ್ಷಣವನ್ನು ಪ್ರಗತಿ ಪಥದ ಹಾದಿಯನ್ನು ಅನುಸರಿಸಬೇಕಾದರೆ ಮಾನವನು ಹೇಗೆ ಸಂಘ ಜೀವನವನ್ನು ನಡೆಸಲು ಇಚ್ಛಿಸುವನೊ ಹಾಗೆಯೇ ರಾಷ್ಟ್ರವು ಸಹ ಪರಸ್ಪರ ಸಂಬಂಧವನ್ನು ಹೊಂದಿರುವುದು ಅಗತ್ಯ. ಈ ದಿನ ಇದನ್ನೆ ಅಂತರರಾಷ್ಟ್ರೀಯ ಸಂಬಂಧ ಎಂಬ

ಅಂಕಿತದಿಂದ ಗುರ್ತಿಸಲಾಗಿದೆ. ಈ ರೀತಿ ಸಂಬಂಧ ಅನೇಕ ನೀತಿ ನಿಯಮಗಳನ್ನು ಒಳಗೊಂಡಿರುತ್ತದೆ. ಅದೇ ವಿದೇಶಾಂಗ ನೀತಿ. ಇದು ಪ್ರಾಚೀನ ಕಾಲದಿಂದು ಬೆಳೆದು ಅಳಿದು ಉಳಿದು ಕೊಂಡು ಬಂದಿರುವಂತದ್ದು. ಇದನ್ನೇ ಕೌಟಿಲ್ಯನು ಷಾಡ್ಗುಣ್ಯ ಸಿದ್ಧಾಂತ ಎಂಬ ಹೆಸರಿನಿಂದ ಕರೆದಿದ್ದಾನೆ. ಇದು ರಾಜ್ಯದ ಯೋಗಕ್ಷೇಮ, ಶಮ, ದಮಗಳ ಮೇಲೆ ನಿಂತಿವೆ. (ವ್ಯಾಯಾಮ, ಉದ್ಯಮ) ಹಾಗು ಇವೆರಡು ಅರಸನ ಷಾಡ್ಗುಣ್ಯ ದೋರಣೆಯ ಮೇಲೆ ನಿಂತಿವೆ. ಇಲ್ಲಿ ವಿಜಿಗಿಷು ರಾಜಮಂಡಲದ ನಾಭಿಯಂತೆ ಅದರ ನೇತೃತ್ವ ವಹಿಸಬೇಕು. ರಾಜಮಂಡಲದ ಪ್ರಕೃತಿಯೊಡನೆ ಈ 6 ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾನೆ ಅವುಗಳೆಂದರೆ :

1) ಸಂಧಿ–ಶಾಂತಿ ಒಪ್ಪಂದ
2) ವಿಗ್ರಹ–ಯುದ್ಧದ ನೀತಿ
3) ಯಾನ–ಶಕ್ತಿಯ ಪ್ರದರ್ಶನ
4) ಅಸನ–ತಟಸ್ಥತೆ
5) ಸಂಶ್ರಯ-ಆಶ್ರಯ ಪಡೆಯುವುದು.
6) ದ್ವೈಧೀಭವ - ಎರಡು ನೀತಿಯನ್ನು ಅನುಸರಿಸು ವುದು.

1) ಸಂಧಿ : ಎಂದರೆ ಶಾಂತಿಯ ಒಪ್ಪಂದ, ಪರಸ್ಪರ ರಾಷ್ಟ್ರಗಳು ಶಾಂತಿಯಿಂದ, ಸಮೃದಿಯಿಂದ, ಸಂಯಮದಿಂದ, ಸಹಬಾಳ್ವೆಗೆ. ಸಾಂಘಿಕತೆಗೆ ಸಂಯುಕ್ತ ಸಮಯೋಚಿತ ಸಹಕಾರ ಮನೋಭಾವವನ್ನು ಬೆಳೆಸುವುದು. 'ಯುದ್ಧಕ್ಕಿಂತ ಶಾಂತಿಯ ಒಪ್ಪಂದವೇ ಕ್ಷೇಮ' ಎಂದು ಕೌಟಿಲ್ಯನ ಮತ. ಎಲ್ಲಾಧರ್ಮ

ಗಳು, ಸೂತ್ರಗಳು, ಶಾಸ್ತ್ರಗಳು, ಶಾಖೆಗಳ, ವೇದೋಪನಿಷತ್ತು ಗಳು, ಶೃತಿ, ಸ್ಮೃತಿ, ಪುರಾಣ ಕಥೆಗಳು ಇದನ್ನು ಒತ್ತಿ ಹೇಳಿವೆ. ಈ ರೀತಿ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವಾಗ ವಿವಿಧ ರೀತಿಗಳನ್ನು ಅನುಸರಿಸಬೇಕೆಂದಿದ್ದಾನೆ ಅವುಗಳೆಂದರೆ :-

1 ದಂಡೋಪಂಥ - ಸೈನ್ಯ ಶಕ್ತಿಯನ್ನು ಬಿಡುವುದು.
2 ಕೋಶಪಂಥ - ಹಣಕಾಸಿನ ಮೇಲಿನ ಶಾಂತಿ
3 ದೇಶಿ ಪಂಥ - ಭೂಭಾಗದ ಮೂಲಕ ಶಾಂತಿ
4 ಸುವರ್ಣಪಂಥ - ಸಂಪೂರ್ಣ ಶಾಂತಿ.

2) ವಿಗ್ರಹ

ಯುದ್ಧದ ನೀತಿಯೆ ವಿಗ್ರಹ, ಇದೊಂದು ಯುದ್ಧ ಮಾಡುವ ವಿಧಾನವಾಗಿದ್ದು ಇದನ್ನು ತೆರೆದ ಯುದ್ಧವೆಂದು ಕರೆಯಲಾಗಿದೆ. ಇದನ್ನು ಕೆಲವು ವೇಳೆ ರಕ್ಷಣೆಗಾಗಿ ಇನ್ನು ಕೆಲವು ವೇಳೆ ಆಕ್ರಮಣಕ್ಕಾಗಿ ಬಳಸಲಾಗುತ್ತದೆ, ರಾಜನು ತನ್ನ ದೇಶದ ರಕ್ಷಣೆ ಮಾಡಿಕೊಳ್ಳುತ್ತಾನೆ. ಒಂದುವೇಳೆ ವಿಜಿಗಿಷು ಬಿಲಿಷ್ಟನಾಗಿದ್ದರೆ, ಯಾವಾಗ ರಾಜನ ಶತ್ರುವು ತೊಂದರೆಗೆ ಸಿಲುಕಿಕೊಂಡಿರುತ್ತಾನೋ ಅಥವಾ ಬೇರೆ ರಾಜ್ಯದೊಂದಿಗೆ ಯುದ್ಧ ನಿರತನಾಗಿರುತ್ತಾನೋ ಅಂತಹ ವೇಳೆಯಲ್ಲಿ ಇದನ್ನು ಶಿಫಾರಸ್ಸು ಮಾಡಲಾಗುತ್ತದೆ. ಯುದ್ಧದಲ್ಲಿ ಯಾರು ಜಯ ಗಳಿಸಿದರು ಅದು ನಷ್ಟವೇ ವಿನಃ ಲಾಭವಂತು ಇಲ್ಲವಾದ್ದರಿಂದ ಯುದ್ಧ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಆದ್ದರಿಂದಲೇ ಕೌಟಿಲ್ಯನು ಶಾಂತಿ ಸಂಧಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾನೆ. ಇಲ್ಲಿ ಸೈನಿಕರ ಮತ್ತು ಗೂಢಚಾರ್ಯರುಗಳ ಪಾತ್ರ ಪ್ರಮುಖವಾಗಿರುತ್ತದೆ. ಕೌಟಿಲ್ಯನು ಯುದ್ಧ ನೀತಿಯನ್ನು

ಮೂರು ವಿಭಾಗಗಳಾಗಿ ವಿಂಗಡಿಸಿ ಈ ಕೆಳಕಂಡಂತೆ ಹೆಸರಿಸಿದ್ದಾನೆ.

ಅ) ಪ್ರಕಾಶಯುದ್ಧ (ಮುಕ್ತ ಅಥವಾ ತೆರೆದಯುದ್ಧ)

ಆ) ಕೋಡಯುದ್ಧ (ಮೋಸದ ಅಥವಾ ಶಕ್ತಿಯುತವಾದ್ದು)

ಇ) ತಸ್ಮಿತಯುದ್ಧ - ಶಾಂತಿಯುದ್ಧ (ನಿಧಾನಗತಿ)

ಯಾವುದೇ ರೀತಿಯ ಯುದ್ಧ ಮಾಡಬೇಕಾದರೆ ಕುಟಿಲೋಪಾಯವನ್ನು ಅನುಸರಿಸಬೇಕು. ಎಂಬುದು ಕೌಟಿಲ್ಯನ ಅಭಿಮತವಾಗಿದೆ. ಅವುಗಳೆಂದರೆ, 1) ಧರ್ಮವಿಜಯ 2) ಲೋಭವಿಜಯ 3) ಅಸುರವಿಜಯ ಯಾವುದೇ ಯುದ್ಧವನ್ನು ಪರಿಸ್ಥಿತಿಗೆ ತಕ್ಕಂತೆ ಬಳಸಬೇಕು.

ಯುದ್ಧವನ್ನು ಯಾವಾಗ ಮಾಡಬೇಕು. ಶತೃತ್ವವನ್ನು ಯಾವ ಸಮಯದಲ್ಲಿ ತೋರಿಸಿಕೊಳ್ಳಬೇಕು ಅದರ ಜೊತೆಗೆ ಯಾವಾಗ ತನ್ನ ಸೈನ್ಯ ಬಲವಾಗಿರುತ್ತದೆಯೋ ಆಗ, ಹಾಗೂ ಪ್ರಕೃತಿದತ್ತ ರಕ್ಷಣೆ ಇದ್ದಾಗ, ವೈರಿಯು ಶಕ್ತಿಹೀನನಾದಾಗ, ಅವನು ತೊಂದರೆಯಲ್ಲಿರುವಾಗ ಸಂದರ್ಭವನ್ನು ವಿಜಿಗೀಷುವು ಉಪಯೋಗಿಸಿಕೊಂಡು ಯುದ್ಧವನ್ನು ಮಾಡಬೇಕೆಂಬ ಕುಟಿಲ ನೀತಿಯನ್ನು ಚಾಣಕ್ಯನು ಪ್ರತಿಪಾದಿಸಿದ್ದಾನೆ.

3) ಯಾನ : ಯುದ್ಧದ ನೀತಿಯಾಗಿರದೆ, ಯುದ್ಧ ಮಾಡುವುದಕ್ಕಾಗಿ ಸಿದ್ಧವಾಡಿಕೊಳ್ಳುತ್ತ ತನ್ನ ಬಲ ಎಷ್ಟಿದೆ ವೈರಿಗೆ ಗೋಚರಪಡಿಸುತ್ತಾ ಹೋಗುವುದು. ಇಲ್ಲಿ ಯುದ್ಧದ ಅವಶ್ಯಕತೆ ಇರುವುದಿಲ್ಲ. ಅದರ ಮೂಲಕ ವೈರಿರಾಷ್ಟ್ರದ ಕೆಲಸವನ್ನು ಹಾಳುಮಾಡಿ ಅಲ್ಲಿಂದ ಸಂಪತ್ತನ್ನು ದೋಚಿ ತನ್ನದ್ದನ್ನು ಹೆಚ್ಚಿಸಿಕೊಳ್ಳುವುದು.

4) ಆಸನ (ತಟಸ್ಥತೆ) : ಯಾವಾಗಲು ತಟಸ್ಥವಾಗಿರದೆ ಸಮಯ ಬಂದಾಗ ಅಂದರೆ ವಿಜಿಗಿಷು ಪರರಾಷ್ಟ್ರಗಳಿಗೆ ಸಹಾಯಮಾಡಿ ಇವನ ಭಂಡಾರ ಬರಿದಾದಾಗ, ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಶತೃವನ್ನು ಬಲಹೀನನನ್ನಾಗಿ ಮಾಡಲು ಈ ನೀತಿಯನ್ನು ಸಂದರ್ಭಕ್ಕೆ ಅನುಗುಣವಾಗಿ ಅನುಸರಿಸಬೇಕು. ಇದು ಸಾಮಾನ್ಯವಾಗಿ ಮಂಡಲದ ಮಾಧ್ಯಮ ಮತ್ತು ಉದಾಸೀನ ರಾಷ್ಟ್ರಗಳಿಗೆ ಸಂಬಂಧಪಟ್ಟಿರುತ್ತದೆ.

5) ಸಂಶ್ರಯ : ಎಂದರೆ ಆಶ್ರಯಪಡೆಯುವುದು ಎಂದರ್ಥ. ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳದೆ ಹೋದಾಗ ಬೇರೆಯವರ ಆಶ್ರಯ ಪಡೆದು ದೊರೆಯು ಶಕ್ತಿಹೀನನಾಗಿ ಅಡಿಯಾಳಿನಂತಿದ್ದು ಶಕ್ತಿ ಬಂದಾಗ ಶತೃವನ್ನು ದಮನ ಮಾಡಬೇಕು.

6) ದ್ವೈಧೀಭವ

ಎಂದರೆ ವಿಜಿಗಿಷು ಏಕಕಾಲದಲ್ಲಿ ದ್ವಿನೀತಿಯನ್ನು ಅನುಸರಿಸುವುದು, ಒಂದುಕಡೆ ಯುದ್ಧನೀತಿ ಮತ್ತೊಂದುಕಡೆ ಶಾಂತಿನೀತಿ ಹಾಗೂ ಒಪ್ಪಂದ ಮಾಡಿಕೊಂಡು ಅವನ ಸಹಾಯ ಪಡೆದುಕೊಂಡು ಜಯಗಳಿಸುವುದು ಈ ನೀತಿ.

ಕೌಟಿಲ್ಯನು ಈ ಸಿದ್ಧಾಂತದಲ್ಲಿ ವಿವಿಧ ವ್ಯವಸ್ಥಿತ, ವೈವಿಧ್ಯಮಯ ನೀತಿ, ಅನೀತಿಗಳನ್ನು ಅನುಸರಿಸಿ ವಿಜಿಗಿಷು ಯುದ್ಧ ಅಥವಾ ಶಾಂತಿ ಮಾಡಿಕೊಳ್ಳಬೇಕೆಂಬುದನ್ನೂ ಬಹಳ ಸುಂದರವಾಗಿ ವಿಚಾರಮಾಡಿರುವುದು ಕಂಡುಬರುತ್ತದೆ. ಆದರೆ ಇವನು ಈ ಸಿದ್ಧಾಂತದಲ್ಲಿಯ ಕೆಲವು ವಿಚಾರಗಳು ನಾಣ್ಯಕ್ಕೆ ಒಂದೇ ಮುಖವಿದೆ ಎಂಬ ಪರಿಭ್ರಮೆಗೆ ಸಿಲುಕಿಕೊಂಡಿರುವುದು ಕಾಣುತ್ತದೆ.

ರಾಯಭಾರತ್ವ

ಇದು ಈ ದಿನದ ಸರ್ಕಾರದ ವ್ಯವಸ್ಥೆಯಲ್ಲಿ ಮಾತ್ರವಿರದೆ ಪ್ರಾಚೀನ ಕಾಲದಿಂದಲೂ ಬೆಳೆದು ಉಳಿದುಕೊಂಡು ಬಂದಿರುವ ಜೀವಂತ ಪ್ರಮುಖಾಂಶವಾಗಿದೆ. ಇದಿಲ್ಲದೆ ಹೋದರೆ ವಿದೇಶಾಂಗ ನೀತಿಯಾಗಲಿ, ಸಂಬಂಧವಾಗಲಿ, ವ್ಯಾಪಾರ ವ್ಯವಹಾರವಾಗಲಿ ಸರಿಯಾಗಿ ನಡೆಯುವುದು ಸಾಧ್ಯವಿಲ್ಲ. ರಾಮಾಯಣ ಮತ್ತು ಮಹಾ ಭಾರತ ಕಾಲದಲ್ಲಿಯು ಸಹಾ ಇದರ ಮೂಲಕವೇ ಮಹತ್ಸಾಧನೆ ಯಾಗಿರುವುದು ಕಂಡು ಬರುತ್ತದೆ ಸ್ವಯಂ ಶ್ರೀ ಕೃಷ್ಣನೇ ಪಾಂಡವರ ರಾಯಭಾರಿಯಾಗಿ ಪಾಂಡವ ಕೌರವರನ್ನು ಒಂದು ಮಾಡಲು ಪ್ರಯತ್ನಿಸಿ ಅದರಲ್ಲಿ ವಿಫಲಗೊಳ್ಳುತ್ತಾನೆ. ಇದು ಶಾಂತಿಯ ಒಪ್ಪಂದದ ಬದಲುಯುದ್ಧದಲ್ಲಿ ಪರಿಸಮಾಪ್ತಿ ಯಾಗುತ್ತದೆ. ಅದೇ ರೀತಿ ರಾಮಾಯಣವಲ್ಲಿಯು ಸಹಾ ಭಗವಂತನೆಂದು ಪೂಜಿಸಲ್ಪಡುತ್ತಿರುವ ಹನುಮಂತನೇ ಶ್ರೀರಾಮ ಚಂದ್ರನ ರಾಯಭಾರಿಯಾಗಿ ರಾವಣನಲ್ಲಿಗೆ ಹೋಗಿ ಶಾಂತಿ ಒಂಪ್ಪಂದಕ್ಕೆ ಯತ್ನಿಸುತ್ತಾನೆ. ಆದರೆ ಅವನಿಗೆ ಅಲ್ಲಿ ದೊರೆತಿದ್ದು ಅವಮಾನ, ಅಪಮಾನ, ಅಶಾಂತಿ, ಅಸಹನೆ, ಅಸಹ್ಯಕರ ನಡವಳಿಕೆ ಇದರಿಂದಾಗಿ ಇದು ಸಹಾ ಯುದ್ಧದಲ್ಲಿಯೇ ಸಮಾಪ್ತಿ ಯಾಯಿತು. ಹೀಗೆ ಪರಸ್ಪರ ರಾಜ್ಯಗಳ ನಡುವಣ ಸಂಬಂಧಗಳು ರಾಯ ಭಾರತ್ವದ ಮೂಲಕವೇ ಸಾಗಬೇಕು.

ರಾಯಭಾರತ್ವ ಎಂದರೆ ಸಂಧಾನಗಳನ್ನು ಏರ್ಪಡಿಸುವ ಒಪ್ಪಂದದ ಮೂಲಕ ಶಾಂತಿ ಸ್ಥಾಪನೆ ಅಥವಾ ಪರಸ್ಪರ ಸೌಹಾರ್ದಯುತ ಬದುಕಿಗೆ ಅವಕಾಶ ಮಾಡಿಕೊಡುವುದು ಈತ ನನ್ನು 'ದೂತ' ಎಂಬ ಅಂಕಿತದಿಂದ ಹೆಸರಿಗೆ ಇವನ ಮೂಲಕವೇ ಈ ಕಾರ್ಯ ಸಾಧ್ಯ. ಈ ರಾಯಭಾರಿಗಳ ಮೂಲಕವೇ ಒಬ್ಬ ರಾಜನ ಅಥವಾ ರಾಜ್ಯದ ಅಳಿವು ಉಳಿವು ಇದ್ದುದರಿಂದ ಈತನು ರಾಜನಿಗೆ ಕಣ್ಣು, ಕಿವಿ, ಮೂಗು, ಧ್ವನಿ ಮೆದುಳುಗಳಾಗಿದ್ದು ಇವನಿಗೆ ರಾಜಕೀಯ ಪ್ರಜ್ಞೆ ಹಾಗೂ ಇಂದ್ರಿಯ ನಿಗ್ರಹ (ಹಿಡಿತ) ಉತ್ತಮವಾದ ಧ್ವನಿ, ಸುಂದರಮುಖ. ಆಕರ್ಷಣೆ ಯುತವಾದ ಶರೀರ, ನಯವಿನಯ, ಮಾತುಗಾರಿಕೆ ಬುದ್ಧಿಶಕ್ತಿ, ಸ್ವಸಾಮರ್ಥ್ಯ, ಚಾಣಾಕ್ಷತನ, ದಕ್ಷತನ ಅಂದರೆ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಹೋಗುವಂತಹ ಅಥವಾ ಸ್ಪಂಧಿಸುವ ವೇಷ ಭೂಷಣಗಳನ್ನು ಬದಲಾಯಿಸಿಕೊಳ್ಳುವ ಬಗ್ಗೆ ಶ್ರದ್ಧಾ ವಂತಿಗೆ, ಉತ್ಸಾಹಿ ದೇಶಪ್ರೇಮಿ, ಸಮಯಕ್ಕೆ ತಕ್ಕಂತೆ ಸುಳ್ಳು ಹೇಳುವುದು ಇನ್ನು ಮುಂತಾದ ಮಿಶ್ರಿತ ಗುಣಗಳು ಇದ್ದು ಜಾತಿ, ಮತ, ಧರ್ಮ, ಲಿಂಗ ಬೇಧವಿಲ್ಲದೆ ರಾಯಭಾರತ್ವಸ್ಥಾನ ನೀಡುವ ಪದ್ಧತಿ ರೂಢಿಯಲ್ಲಿತ್ತು.

ಕೌಟಿಲ್ಯನು ಮೂರು ರೀತಿಯ ರಾಯಭಾರಿಗಳ ಬಗೆಗೆ ವಿಚಾರ ಮಾಡಿದ್ದಾನೆ ಅವರುಗಳೆಂದರೆ :–

1 ಉತ್ತಮ ದೂತ – ನಿಶ್ರಿತಾರ್ಥ

2 ಮಧ್ಯಮ ದೂತ – ಪರಿಮಿತಾರ್ಥ

3 ಅವರ್ಗ ದೂತ – ಶಾಸನಹರ

1) ಉತ್ತಮ ದೂತ. ಈತನು ಮೊದಲನೆಯ ವರ್ಗಕ್ಕೆ ಸೇರಿದ್ದು ಅತಿ ಬುದ್ಧಿವಂತನು ದೇಶಕ್ಕೆ ಒಳಿತಾಗುತ್ತದೆಯೆಂದರೆ ಯಾವುದೇ ರೀತಿಯ ತಿರ್ಮಾನವನ್ನು ರಾಜನು ಇಲ್ಲದೆ ಸ್ವತಃ ತಿರ್ಮಾನ ಅಥವಾ ಒಪ್ಪಂದವನ್ನು ತೆಗೆದುಕೊಳ್ಳುವಂತದ್ದು.

2) ಮಧ್ಯಮದೂತ : ಉತ್ತಮ ದೂತ ಹೊಂದಿರ ಬಹುದಾದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದು ಯಾವುದೇ ರೀತಿಯ ಒಪ್ಪಂದ ಅಥವಾ ತೀರ್ಮಾನವನ್ನು ಕೈಗೊಳ್ಳಬೇಕಾದರೆ ರಾಜನ ಅಪ್ಪಣೆ ಅವಶ್ಯಕವಾಗಿತ್ತು.

3) ಅವರ್ಗದೂತ : ಕೇವಲ ರಾಜರು ಹೇಳಿದಂತಹ ವಿಷಯಗಳನ್ನು ತಿಳಿಸಿ ಬರುವುದಷ್ಟೆ ಇವನ ಕಾರ್ಯ, ಇವನಿಗೆ ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ವಿರುವುದಿಲ್ಲ. ಕೌಟಿಲ್ಯನ ಪ್ರಕಾರ ಮಂಡಲದ ಎಲ್ಲಾ ರಾಜ್ಯಗಳು ಈ ಸಂಬಂಧವನ್ನು ಹೊಂದಿರಬೇಕು,

ಕೌಟಿಲ್ಯನ ಪ್ರಕಾರ ರಾಯಭಾರಿಗಳಿಗೆ ಇರಬೇಕಾದ ಅರ್ಹತೆಗಳು

1) ಉತ್ತಮಕುಲ ಹಾಗು ಕುಟುಂಬದವನು, ನ್ಯಾಯ ಅನ್ಯಾಯವನ್ನು ವಿಮರ್ಶೆ ಮಾಡುವನು, ಅರಿವು ಉಳ್ಳವನು ಪ್ರಾಜ್ಞನು, ಪಂಡಿತನು, ಚತುರನು, ಚಾಣಾಕ್ಷನು, ಸೂಕ್ಷ್ಮ ಮತಿಯು, ಚುರುಕುಬುದ್ಧಿಯುಳ್ಳವನು, ವಾಕ್‌ಚಾಳಿಯು, ಶಾಂತಮನಸ್ಕನು, ಧೃಡಕಾಯನು, ಪುಷ್ಟವಂತನು, ಧೃಡ ಮನಸ್ಕನು, ಸಾಹಸಿಯು, ಧೈರ್ಯವಂತನು, ಸುಂದರನು, ಸುಜ್ಞಾನಿಯು, ಸುಸ್ಥಿರಸ್ವಭಾವದವನು, ಆರೋಗ್ಯವಂತನು,

ಸ್ವಚಿತ್ತನು, ದೇಶಪ್ರೇಮಿಯೂ ಸೇವಾಮನೋಬಾವವುಳ್ಳವನು, ಆಕರ್ಷಣಿಯನು, ಹಾಗೂ ಶಿಸ್ತಿನವನು, ಸಂಯಮಿಯೂ, ಸಂದರ್ಭಕ್ಕೆ ಸ್ಪದಿಸುವಂತವನು ಆಗಿರಬೇಕು.

ರಾಯಭಾರಿಯಹಕ್ಕು ಬಾಧ್ಯತೆ ಮತ್ತು ಕರ್ತವ್ಯಗಳು

ಎಲ್ಲಾ ರೀತಿಯ ತೆರಿಗೆಯಿಂದ ವಿನಾಯಿತಿ

ಸಾಮಾನ್ಯವಾಗಿ ರಾಯಭಾರಿಗಳು ಅವರು ಹೋಗಿರುವ ರಾಜ್ಯದ ಸಾಮಾನ್ಯ ರಾಜನಿಗೆ ಒಳಪಡಿಸುವಂತಿಲ್ಲ.

ಈತನು ನಂಬಿಕಸ್ಥನಾಗಿ ನಡೆದುಕೊಳ್ಳುವುದು, ಅದರ ಜೊತೆಗೆ ತನಗೆ ಯಾರಮೇಲೆ ನಂಬಿಕೆ ಇದಯೊ ಅಂತಹವರನ್ನು ಈತನ ಸಿಬ್ಬಂದಿಯನ್ನಾಗಿ ಹೊಂದಬಹುದು.

ದೇಶದ ಯಾವುದೇ ಭಾಗದಲ್ಲಿ ಮುಕ್ತವಾಗಿ ಸಂಚರಿಸಲು ಅವಕಾಶವಿರಬೇಕು.

ವಾಣಿಜ್ಯ-ವ್ಯಾಪರ-ವ್ಯವಹಾರ ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಕೊಡಬೇಕು.

'ರಾಯಭಾರಿಗಳಲ್ಲಿ ರಾಯಭಾರತ್ವದ ಪ್ರಜ್ಞೆ ಹಾಗೂ ರಾಯಭಾರತ್ವದ ಮಿತಿ ಮೀರಬಾರದು'.

ಒಂದು ವೇಳೆ ರಾಯಭಾರಿ ತಪ್ಪುಮಾಡಿದರೆ, ನಿಯಮಗಳನ್ನು ಉಲ್ಲಂಘನೆ ಮಾಡಿದರೆ ಅಥವಾ ದೇಶದ್ರೋಹದ ಮಾರ್ಗವನ್ನು ಅನುಸರಿಸಿದರೆ ಆತನಿಗೆ ಉಗ್ರಶಿಕ್ಷೆ ನೀಡಬೇಕು

ತಕ್ಷಣವೇ ವಾಪಸ್ ಕರೆಸಿಕೊಂಡು ದೇಶದ ಗೌರವವನ್ನು ಉಳಿಸಬೇಕು, ಎಂಬುದನ್ನು ಕೌಟಿಲ್ಯನು ಬಹಳ ಕಠಿಣವಾಗಿ ನುಡಿದಿದ್ದಾನೆ. ಈ ದಿನವು ಸಹಾ ಎಲ್ಲಾ ರಾಷ್ಟ್ರಗಳು ಇದನ್ನು ಅನುಸರಿಸುತ್ತಿವೆ.

ರಾಯಭಾರಿಯ ಕಾರ್ಯಭಾರಗಳು

ಮಿತ್ರರಾಷ್ಟ್ರಗಳಲ್ಲಿ ಮಿತ್ರಭೇದ ಉಂಟುಮಾಡಿದರೆ ಅದರ ಮೂಲಕ ತನ್ನ ರಾಷ್ಟ್ರಕ್ಕೆ ಅನುಕೂಲವಾಗುತ್ತದೆ.

ಪರರಾಷ್ಟ್ರದ ಪ್ರಜೆಗಳಿಗೆ ನಮ್ಮ ರಾಷ್ಟ್ರದ ರಾಜನ ಮೇಲೆ ಪ್ರೀತಿ ವಿಶ್ವಾಸ ಮೂಡುವಂತೆ ಯತ್ನಿಸಬೇಕು. ಸರಿಯಾದ ರಾಜಕಾರ್ಯಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಿ ತನ್ನ ದೇಶಕ್ಕೆ ಆಗಾಗ್ಗೆ ಕಳುಹಿಸಬೇಕು.

ತನ್ನ ದೇಶದಿಂದ ಯಾರಾದರು ಆದೇಶಕ್ಕೆ ಬಂದರೆ ಅವರ ಯೋಗಕ್ಷೇಮವನ್ನು ವಿಚಾರಿಸಬೇಕು.

ಶತ್ರುರಾಷ್ಟ್ರಗಳ ಶತ್ರುತ್ವ ಹೆಚ್ಚದಂತೆ ನೋಡಿಕೊಳ್ಳಬೇಕು.

ವಿದೇಶಿ ರಾಜಕುಟುಂಬದ ಸಂಬಂಧಿಗಳನ್ನು ಅಪಹರಿಸುವುದು, ಶತ್ರುರಾಷ್ಟ್ರದ ಅಧಿಕಾರಿಗಳಿಗೆ ತಮ್ಮ ರಾಜನ ಮೇಲೆ ವಿಶ್ವಾಸ, ಪ್ರೀತಿ ಮೂಡಿಸುವುದರ ಜೊತೆಗೆ ಅವರು ನಿಷ್ಠರಾಗಿರುವಂತೆ ಮಾಡಬೇಕು.

ಗೂಡಾಚಾರನಾಗಿ, ರಾಷ್ಟ್ರದ ಮುಖ್ಯ ವಿಚಾರಗಳನ್ನು ರಾಜನಿಗೆ ಕಳುಹಿಸಬೇಕು, ರಾಜನ, ರಾಜ್ಯದ ಬಗೆಗೆ ಉದಾಸಿನ

ದಿಂದ ಇರಕೂಡದು, ಶಾಂತಿಸ್ಥಾಪನೆಗೆ, ಹೆಚ್ಚಿನ ಪ್ರಗತಿಗೆ, ಸದಾ ಪ್ರಯತ್ನಿಸಬೇಕು.

ಒಳಸಂಚಿನಯುದ್ಧ ಮಾಡುವ, ಶಾಂತಿಯ ಒಪ್ಪಂದ ಮುರಿದಾಗ ರಾಜನು ವಿವಿಧ ಕುಟಿಲೋಪಾಯಗಳನ್ನು ಬಳಸ ಬೇಕು ಅವುಗಳಲ್ಲಿ ಮುಖ್ಯವಾದುವುಗಳೆಂದರೆ :-

ಸೇನೆಯಲ್ಲಿರುವ ಅಧಿಕಾರಿಗಳ ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದು.

ವೈರಿಗೆ ವೈರಿಯಾದ ಅರಸನನ್ನು ಪ್ರಚೋದಿಸುವುದು
ಗುಪ್ತಾಚಾರರನ್ನು ನೇಮಕ ಮಾಡಿಕೊಳ್ಳುವುದು
ಆಹಾರ ಸಂಗ್ರಹಾಲಯುವನ್ನು ನಾಶಪಡಿಸುವುದು
ಶತ್ರುಗಳಿಗೆ ನೀರು ನೆರಳು ದೊರೆಯದಂತೆ ನಾಶ ಮಾಡುವುದು

ಹೀಗೆ ಕೌಟಿಲ್ಯನು ವಿದೇಶಾಂಗ ನೀತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾನೆ. ಯಾವುದೇ ಒಂದು ರಾಷ್ಟ್ರ ಪ್ರಬಲವಾಗಬೇಕಾದರೆ ಹಾಗೂ ರಾಷ್ಟ್ರಧೋರಣೆಯ ಏಳಿಗೆಯನ್ನು ಸಾಧಿಸಬೇಕಾದರೆ ಅಲ್ಲಿ ರಾಜನು ಬಲಿಷ್ಟನಾಗಿದ್ದು, ಪರದೇಶೀಯರ ಅಧೀನದಲ್ಲಿ ಪ್ರಜೆಗಳನ್ನು ಶಿಸ್ತಿನಿಂದ ನಡೆಸಿಕೊಂಡು ಹೋಗುವಂತಹ ದರ್ಪ ವನ್ನು ಹೊಂದಿರಬೇಕು, ಈರೀತಿಯಾದರೆ ಧರ್ಮ, ಅರ್ಥ ಗಳೆರಡೂ ಸಿದ್ಧಿಸುತ್ತವೆ. ಆದರೆ ಇವುಗಳೆಲ್ಲ ಸಾಧ್ಯವೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

ಕೌಟಿಲ್ಯನ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳು

ರಾಜನು ದುಡುಕಿನ ಸ್ವಭಾವದವನಾದರೆ ಪರಿಸ್ಥಿತಿಗೆ ತಕ್ಕಂತೆ ಸ್ಪಂದಿಸಬೇಕು. ಈ ಸಂದರ್ಭದಲ್ಲಿ ಅನೇಕ ನಿಯಮಗಳನ್ನು ಅನುಸರಿಸಬೇಕು.

ಶತ್ರುವಿಗಿಂತ ಬಲಶಾಲಿಯಾಗಿದ್ದರೆ, ಅವನ ವಿರುದ್ಧ ಯುದ್ಧ ಘೋಷಿಸಿ, ಜಯಗಳಿಸಿ ಅವನ ರಾಜ್ಯವನ್ನು ವಶಪಡಿಸಿಕೊಳ್ಳಬೇಕು. ಶತ್ರುವಿಗಿಂತ ಬಲಹೀನನಾಗಿದ್ದರೆ ಶಾಂತಿಯ ಒಪ್ಪಂದ ಮಾಡಿಕೊಳ್ಳಬೇಕು, ತನ್ನ ಕೈಯಲ್ಲಿ ಆಗದಿದ್ದರೆ ತಾಟಸ್ಥ್ಯ ನೀತಿಯನ್ನು ಅನುಸರಿಸಬೇಕು, ರಾಜನು ಯಾವಾಗಲು ತನ್ನ ಅಧಿಕಾರ ಸಾಧನೆ, ವಿಜಯದ ಬಗೆಗೆ ಹಾಗೂ ತನ್ನ ದೇಶದ ಬಂಡವಾಳದ ಬಗೆಗೆ ಮಾಹಿತಿಯನ್ನು ನೀಡಬಾರದು.

ತನ್ನ ಉತ್ಪಾದಕ ಕ್ರಿಯೆಗಳ, ಅಭಿವೃದ್ಧಿಯ ಬಗೆಗೆ ಸತ್ಯಗಳ ಪ್ರತಿಕ್ರಿಯೆಯನ್ನು ತಿಳಿಯಬೇಕು.

ತನ್ನ ಶತ್ರುವಿಗೆ ನಷ್ಟವಾಗುವಂತೆ ತನ್ನ ರಾಜಕೀಯ ಹಾಗೂ ಸೈನಿಕ ಸ್ಥಿತಿಗತಿಯನ್ನು ಅಭಿವೃದ್ಧಿಗೊಳಿಸಬೇಕು. ಕೌಟಿಲ್ಯನ ರಾಜ್ಯಾಡಳಿತ ನೀತಿಗೆ ವಿದೇಶಾಂಗ ನೀತಿಯೆ ಮುಖ್ಯ ಒರೆಗಲ್ಲು.

ಸಾಮಾಜಿಕ ಜೀವನ ಅಥವಾ ವ್ಯವಸ್ಥೆ

ಕೌಟಿಲ್ಯನ ಕಾಲದ ಸಮಾಜಲ್ಲಿಯ ಜೀವನ ಸರಳವಾಗಿ ಸುವ್ಯವಸ್ಥಿತವಾಗಿ, ಸುಂದರವಾಗಿ, ಸೌಭಾಗ್ಯ ಸ್ಥಿತಿಯಿಂದ ಕೂಡಿತ್ತು. ಜೀವನದ ವಿಕಾಸ, ಜೀವನಾಭಿವೃದ್ಧಿ, ಸಮುದಾಯ ಸಹಾಯಕ ಸಚ್ಚಾರಿತ್ರ್ಯ, ಸಾಂಘಿಕ, ಅನ್ಯೋನ್ಯತೆಯು, ಶಾಂತಿ ಯುತ, ನೆಮ್ಮದಿಯುತ, ಗೌರವಯುತ, ಗಂಭೀರದಾಯಕ, ಕರ್ತವ್ಯಬದ್ಧ, ಶ್ರೇಷ್ಠಯುತ, ಶ್ರದ್ಧಾನ್ವಿತ, ಸರ್ವತೋಮುಖ ಏಳಿಗೆಗೆ ಅವಕಾಶನೀಡುವಂತಹ ಸಾಮಾಜಿಕ ವ್ಯವಸ್ಥೆ ಆದಿನ ಇದ್ದಿತು. ಇದಕ್ಕೆಲ್ಲಾ ಕಾರಣ ಆದಿನ ರಚಿತವಾಗಿದ್ದ ಶ್ರೇಣಿ ಅಥವಾ ನಿಗಮ ಸಭೆಗಳು, ಶ್ರೇಣಿಗಳು ಪಟ್ಟಣದ ನೈರ್ಮಲ್ಯ ರಕ್ಷಣೆ, ನ್ಯಾಯಪಾಲನೆ, ಜಲ, ವಸತಿ, ದಾನಧರ್ಮ ಅಂದರೆ ಕಲ್ಯಾಣಕಾರ್ಯಕ್ರಮಗಳನ್ನು ಹಾಗೂ ಸಾರ್ವಜನಿಕ ಕರ್ತವ್ಯ ಗಳೆಂದರೆ ವಂತಿಗೆ ಕೊಡುವುದು ಸೆರೆ ಊರಿನಿಂದ ಬಂದ ಪ್ರವಾಸಿ ಗರಿಗೆ ಆಶ್ರಯ, ಊಟ, ಊರ ಕೆಲಸಕ್ಕಾಗಿ ಗ್ರಾಮಾಧಿಕಾರಿ ಜೊತೆಗೆ ಹೊರಟರೆ ಅವನನ್ನು ಅನುಕರಿಸುವುದು, ಅನಾಥರ ರಕ್ಷಣೆ ಅವರ ಆಸ್ತಿಯನ್ನು ನೋಡಿಕೊಳ್ಳುವುದು, ಗ್ರಾಮದ ಕೋಟೆ ಸಂರಕ್ಷಣೆ, ಬೆಂಕಿಯನ್ನು ನಂದಿಸಲು ಧಾವಿಸುವುದು ಸಂಕಟದಲ್ಲಿರುವವರನ್ನು ಪಾರುಮಾಡುವುದು. ಆ ಕಾಲದ ನಗರ ವಾಸಿಗಳ ಸೌಶೀಲ್ಯಾದಿ ಗುಣಗಳನ್ನು, ನಾಗರಿಕತೆಯನ್ನು ವೈಶಿಷ್ಟ್ಯವನ್ನು ಸಂಸ್ಕೃತಿಯ ಮಟ್ಟ ಮುಂತಾದುವುಗಳಬಗ್ಗೆ ವಿಚಾರ ಮಾಡುವುದು ಒಳಿತು.

ಇವನ ಕಾಲದಲ್ಲಿ ನಗರ ವ್ಯವಸ್ಥೆ ಬಹಳ ಕ್ರಮಬದ್ಧವಾಗಿದ್ದಿತು. ರಾಜಧಾನಿ, ನಗರ, ಪಟ್ಟಣ, ಖೇಡ, ಖರ್ವಟ, ಕುಬ್ಜಗಳೆಂದು ಏಳುವಿಧವಾದ ನಗರಗಳೂ ದಂಡಕ, ಸರ್ವತೋಭದ್ರ, ನಂದ್ಯಾವರ್ತ, ಪದ್ಮಕ, ಸ್ವಸ್ತಿಕ, ಪ್ರಸ್ತರ, ಕಾರ್ಯುಕ ಚತುರ್ಮುಖ, ಎಂಬ ಕೋಲು ಕಮಲ ಮತ್ತು ಬಿಲ್ಲಿನಾಕಾರಗಳಾದ ಎಂಟು ವಿಧದ ಗ್ರಾಮಗಳಿದ್ದವು. ಗ್ರಾಮ ಮತ್ತು ನಗರ ರಚನೆ ವಿಹಿತವಾಗಿಯೂ ಪ್ರಜಾರಕ್ಷಣೆಯ ದೃಷ್ಟಿಯಿಂದ ಅನುಕೂಲವಾಗಿ ಸುವ್ಯವಸ್ಥಿತವಾಗಿರಬೇಕು. ಮನೆಗಳನ್ನು ಸ್ವಚ್ಛವಾಗಿಟ್ಟುಕೊಂಡು ನಗರ, ಹಳ್ಳಿಗಳನ್ನು ಸುಂದರವಾಗಿಟ್ಟುಕೊಳ್ಳಬೇಕೆಂದಿದ್ದಾನೆ.

ನಗರ ಸ್ಥಾಪನೆ ಅಥವಾ ನಗರ ರಚನೆ 'ಸ್ಥಪತಿ' ಹಾಗೂ 'ಸೂತ್ರಗ್ರಾಹಿ' ಮತ್ತು 'ವೂರ್ದಸಿ' ಎಂದರೆ ಶಿಲ್ಪಶಾಸ್ತ್ರ ಮತ್ತು ಚಿತ್ರಕಲೆಯಲ್ಲಿ ಪ್ರವೀಣರಾದವರಿಂದ ಶಾಸ್ತ್ರೋಕ್ತವಾಗಿ ರಚಿತವಾಗಿದ್ದವು. ಇವರುಗಳು ವಿಹಿತವಾದ ಸ್ಥಳಗಳನ್ನು ಗುರ್ತಿಸಿ ಛಾಯಯಂತ್ರದಿಂದ ಮುಖ್ಯ ದಿಕ್ಕುಗಳನ್ನು ವಿಂಗಡಿಸಿ ಯಾಂತ್ರಿಕ ಚಾಕೋನಕ್ಕನುಸಾರವಾಗಿ ರಸ್ತೆ, ರಾಜಬೀದಿ, ಸಾಧಾರಣ ಬೀದಿ ಇನ್ನು ಮುಂತಾದ ಅಂದರೆ ಬಹಳ ಕಾಲ ಉಳಿಯುವಂತಹ ಸುಖ, ಶಾಂತಿ, ನೆಮ್ಮದಿ, ಅಷ್ಟೈಶ್ವರ್ಯ ಸಿದ್ಧಿಗಳನ್ನು ನೀಡುವಂತಹ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಅವರ ಜೊತೆಗೆ ಶಿಲ್ಪಶಾಸ್ತ್ರಕ್ಕೆ ಅನುಗುಣವಾಗಿ ನಗರವು ಚಕ್ರದ ಆಕಾರವಿದ್ದು ಸುತ್ತಲೂ ಬಲವಾದ ಕೋಟೆ ಕಂದಕಗಳಿಂದಲೂ, ಕೋಟೆಯ ಮಹಾದ್ವಾರಗಳ ಮತ್ತು ಗೋಡೆಗಳ ಭವ್ಯವಾದ ರಚನೆಯನ್ನು ವಿಸ್ತಾರವಾದ ಕೋಟೆಗಳ ಮಧ್ಯದಲ್ಲಿರುವ ತೋಟವನ್ನು, ಕಮಲ ಸರೋವರಗಳನ್ನು, ವಾಸದ ಮನೆಗಳನ್ನು ಕುಮಾರಿ ದೇವತಾ ಗೃಹವನ್ನು, ಕಾವಲಿನವರ ಶಿಸ್ತು ಅರ

ಮನೆಯ ಸುತ್ತಲೂ ಕೋಟೆಯಿದ್ದು ರಾಜಧಾನಿಯ ಮಧ್ಯದಲ್ಲಿ ಅರಮನೆ ಮತ್ತು ಆಡಳಿತ ಕಛೇರಿಗಳಿದ್ದು, ರಾಜಮಾರ್ಗವೂ, ದ್ರೋಣಮುಖ, ಸ್ಥಾನೀಯ ಹುಲ್ಲುಗಾವಲಿಗೆ, ಸ್ಮಶಾನಕ್ಕೆ ಹೋಗಲು ದಾರಿ. ಹೀಗೆ ವಿವಿಧ ರೀತಿಯ ಮಾರ್ಗಗಳನ್ನು ಅನುಸರಿಸಿ ನಗರವನ್ನು ನೋಡಲು ಸುಂದರವಾಗಿಯೂ ಪ್ರಜೆಗಳು ಯಾವುದೇ ರೀತಿಯ ಕಷ್ಟಕ್ಕೆ ಸಿಲುಕದ ಹಾಗೆ ವ್ಯವಸ್ಥಿತವಾಗಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಅದರ ಜೊತೆಗೆ ರಾಜಪಥ, ಮಹಾಕಾಲ, ವಾಮನನೆಂಬ ಹೆಸರಿನ ಬೀದಿಗಳು 'ಮಂಗಲವೀದಿ' ಎಂಬ ಹೆಸರಿನ ಮಾರ್ಗವೂ ಕೋಟೆ ಗೋಡೆಯ ಸುತ್ತಾ ಅವುಗಳ ಒಳಭಾಗದಲ್ಲಿ ಊರನ್ನು ಸುತ್ತಿಕೊಂಡಿದ್ದವೆಂದು ಅರ್ಥಶಾಸ್ತ್ರದಲ್ಲಿ ವಿಶ್ಲೇಷಿಸಲಾಗಿದೆ.

ಅರಮನೆಯು ಸಹಾ ಶಿಲ್ಪಶಾಸ್ತ್ರದ ಪ್ರಕಾರವಿರಬೇಕೆಂದು ಅಂದರೆ ಪಟ್ಟಣದ ಮಧ್ಯದಲ್ಲಿ ರಾಜನು ಶತ್ರುಗಳಿಂದಾಗಲೀ, ದ್ರೋಹಿಗಳಿಂದಾಗಲಿ, ಕಪಟಿಗಳಿಂದಾಗಲೀ ಸಹಾದ್ಯಾಯಿಗಳ ಮೋಸದಿಂದಾಗಲೀ ತೊಂದರೆಗೆ ಸಿಲುಕದ ಹಾಗೆ ದುರ್ಭೇದ್ಯವಾದ ಅನೇಕ ಗುಪ್ತ ಮಾರ್ಗಗಳಿಂದಲೂ ಸುರಂಗಗಳಿಂದಲೂ ಕೂಡಿದ್ದು ಅರಮನೆ, ಅಂತಃಪುರ ಮೋಹನ ಗೃಹಗಳಿರಬೇಕೆಂದು ಅದರ ಹತ್ತಿರದಲ್ಲಿ ಸಭಾ ಭವನವಿದ್ದು ಅದರ ಸುತ್ತಲೂ ಮಂತ್ರಿ ಮಹೋದಯರ ನಿವಾಸಗಳಿದ್ದು, ಯೋಗಶಾಲೆಗಳಿಗೋ, ಅಶ್ವ, ಗಜಶಾಲೆಗಳೂ ಕೋಶಗಾರಗಳೂ ಇರುತ್ತಿದ್ದವು. ಪುರ ಅಥವಾ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿ ರಥ ಮತ್ತು ಒಂಟೆಯ ಶಾಲೆಗಳು, ಶಿಲ್ಪಿಗಳ ಮತ್ತು ಕೂಲಿಗಾರರ ವಸತಿಗಳು ಉತ್ತರಕ್ಕೆ ಅಂಗಡಿಗಳು, ಆಸ್ಪತ್ರೆಗಳು, ಬ್ರಾಹ್ಮಣರ ವಸತಿಗಳು, ಪೂರ್ವಕ್ಕೆ ವ್ಯಾಪಾರಿಗಳ ಮನೆಗಳು, ದಕ್ಷಿಣಕ್ಕೆ ಪಟ್ಟಣಾಧ್ಯಕ್ಷರ, ಸೇನನಾಯಕರ, ಸಂಗೀತಗಾರರ ರೂಪದಾಸಿಯರ ವಸತಿ ಗೃಹ

ಗಳಿದ್ದು, ಪಟ್ಟಣದ ಮಧ್ಯಭಾಗದಲ್ಲಿ ದೇವತೆಗಳ ಪೂಜಾ ಆಲಯಗಳು, ಅದರಲ್ಲಿಯೂ ಶಿವ, ಅಪರಾಜಿತ ಅಪ್ರತಿಹತ, ಜಯಂತ, ವೈಜಯಂತ, ವೈಶ್ರವಣ, ಅಶ್ವಿನೀ ಮೊದಲಾದ ದೇವತೆಗಳ ಪೂಜೆ ನಡೆಯುತ್ತಿತ್ತು. ಇದರ ಜೊತೆಗೆ ಮದಿರಾ ದೇವಿಯ ದೇವಾಲಯ ಹಾಗೂ ಕ್ಷಾತ್ರ ದೇವತೆಗಳ ದೇವಾಲಯ ಗಳು ಮತ್ತು ಛತ್ರ, ಧರ್ಮಶಾಲೆಗಳು ಇರುತ್ತಿದ್ದವು. ಆಯಾ ವರ್ಣದವರ, ಅವರವರ ಅಂತಸ್ತಿಗೆ ತಕ್ಕಂತೆ ಮನೆಗಳಿರುತ್ತಿದ್ದವು. ಅಷ್ಟೆಯಲ್ಲದೆ, ಒಂದೇ ಸಮನಾಗಿಯೂ, ಒಂದೇ ಎತ್ತರದವೂ, ಒಂದೇ ಆಯಕಟ್ಟಿನವೂ, ಮನೆಗಳ ಹಿಂದೆ ಹಿತ್ತಲು ಬಾಗಿಲು ಗಳು ಒಂದೇ ಸಾಲಿನಲ್ಲಿದ್ದು ಸಮನಾಗಿರುತ್ತಿದ್ದವು. ಎರಡು ಕಡೆಗಳಲ್ಲಿಯೂ ಕುಳಿತುಕೊಳ್ಳಲು ಅನುಕೂಲವಾಗುವಂತೆ ಕಟ್ಟೆ ಗಳನ್ನು ಕಟ್ಟಿದ್ದರು. ಹತ್ತು ಮನೆಗಳಿಗೆ ಒಂದು ಬಾವಿಯಿದ್ದು ಕುಡಿಯಲು ಯೋಗ್ಯ ನೀರು ದೊರೆಯುತ್ತಿತ್ತು. ಬಟ್ಟೆ ಹೊಗೆ ಯಲು ಅನುಕೂಲವಾಗುವಂತೆ ಕೆರೆ, ಕಟ್ಟೆ, ಕಾಲುವೆ ಮುಂತಾದ ಸೌಲಭ್ಯಗಳ ಜೊತೆಗೆ ಎಲ್ಲಾವು ಸ್ವಚ್ಛವಾಗಿರುವಂತೆ ಎಚ್ಚರಿಕೆ ವಹಿಸಲಾಗಿತ್ತು.

ಈ ಸಮಾಜದಲ್ಲಿರುವವರು ವಿವಿಧ ವರ್ಗಕ್ಕೆ ಸೇರಿರುವ ಕಸಬುದಾರರಾಗಿದ್ದರು. ಅಂದರೆ ನೇಕಾರರು, ಅಗಸರು, ಅಕ್ಕ ಸಾಲಿಗರು, ನಾಣ್ಯ ಪರೀಕ್ಷಕರು, ಶಿಂಪಿಗರು, ಕಾರ್ಮಿಕರು, ಕೂಲಿಗಾರರು, ಒಕ್ಕಲಿಗರು, ಶಿಲ್ಪಿಗಳು, ಗಾಯಕರು, ಚಿಕಿತ್ಸಕರು ಮುಂತಾದವರು.

ಸಮಾಜ ಜೀವನದ ಉದ್ಯೋಗಗಳಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ಸೇವಾ ರೂಪದ ವೃತ್ತಿಗಳು ಮುಖ್ಯ. ಇಲ್ಲಿ ಕೃಷಿ ಮತ್ತು ಕೈಗಾರಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಇವೆರಡು

ರಾಜ್ಯದ ಕಣ್ಣುಗಳಿದ್ದಂತೆ. ಇವುಗಳಿಂದ ಮಾತ್ರ ರಾಷ್ಟ್ರದ, ಸಮಾಜದ, ವ್ಯಕ್ತಿಯು ಉದ್ದೀಪನ ಸಾಧ್ಯ ಎಂದು, ಇವೆರಡು 'ರಾಷ್ಟ್ರರಂಜಕಗಳೆಂದು' ಕೌಟಿಲ್ಯನೇ ಕರೆದಿದ್ದಾನೆ.

ಕುಶಲ ಕಲೆ, ಲಲಿತ ಕಲೆ, ಕಬ್ಬಿಣ, ಚಿನ್ನ, ಬೆಳ್ಳಿ, ಮರ, ಚರ್ಮ, ನೆಯ್ಗೆ, ಬಣ್ಣ, ಕಸೂತಿ, ಶಿಲ್ಪ ಮುಂತಾದ ವೃತ್ತಿಗೆ ಇವನ ರಾಷ್ಟ್ರ ತವರುಮನೆಯಾಗಿತ್ತು. ಅಲಂಕಾರಿಕ, ವಾಸನಾ, ದ್ರವ್ಯ, ರೇಷ್ಮೆ, ಆಭರಣ, ವಾಸ್ತುಶಿಲ್ಪ ಮುಂತಾದ ಪದಾರ್ಥಗಳಲ್ಲಿ ಉತ್ಪತ್ತಿಯಾಗುತ್ತಿದ್ದಲ್ಲದೆ ಬೇರೆ ರಾಷ್ಟ್ರಗಳಿಗೂ ಕಳುಹಿಸಿ ಕೊಡುತ್ತಿದ್ದರು. ಇದರಿಂದ ವಿದೇಶಿ ಸಂಬಂಧ, ವ್ಯಾಪಾರ, ವ್ಯವಹಾರ ವೃದ್ಧಿಯಾಗಿ ಇದರ ಮೂಲಕ ಆರ್ಥಿಕ ಉತ್ಪತ್ತಿ ಹೆಚ್ಚಾಗಿ ಜೀವನ ಸಮೃದ್ಧವಾಗಿ ಸಮುದ್ರಯಾನ, ನೌಕಾ ನಿರ್ಮಾಣ, ಮತ್ತು ರಾಷ್ಟ್ರ ವಿಕಾಸಕ್ಕೆ ಇದು ಉತ್ತೇಜನ ನೀಡಿತಲ್ಲದೆ ಇದರಿಂದ ಗಳಿಸಿದ ಹಣವನ್ನು ಭೋಗ, ಕಲೆ ಹಾಗೂ ರಾಷ್ಟ್ರ ರಕ್ಷಣೆ ಮಾಡುವ ಸೈನ್ಯಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಲು ಉಪಯೋಗಿಸಲಾಯಿತು.

ಎಲ್ಲಾ ರೀತಿಯ ಕಸುಬುದಾರರು ಅವರವರ ಕರ್ತವ್ಯವನ್ನು ಬಹಳ ನಿಷ್ಠೆಯಿಂದ. ನಿಯಮದಿಂದ, ಪ್ರಾಮಾಣಿಕತೆಯಿಂದ ನಿರ್ವಹಿಸಬೇಕಾಗಿತ್ತು. ಅವರವರ ಕಸುಬಿನಲ್ಲಿ ಯಾವುದೇ ರೀತಿಯ ಮೋಸ ಮಾಡಿದರೆ ಅಂತಹವರನ್ನು ಗುರ್ತಿಸಿ ಅವರಿಗೆ ಉಗ್ರ ಶಿಕ್ಷೆ ನೀಡಲಾಗುತ್ತಿತ್ತು. ಜೊತೆಗೆ ಜನಗಳಿಗೆ ಮನರಂಜನೆಯ ದೃಷ್ಟಿಯಿಂದ ಆಗಾಗ್ಗೆ ನಾಟಕ, ಗಾಯನ, ನೃತ್ಯ ಮುಂತಾದುವುಗಳು ನಡೆಯಲು ಉತ್ತೇಜಿಸಲಾಗಿತ್ತು. ಇಲ್ಲಿ ನಿರುದ್ಯೋಗವೆಂಬುದು ಇರಲಿಲ್ಲ.

ಸರ್ಕಾರಿ ನೌಕರರ ಬಗ್ಗೆ ಬಹಳ ಕಠಿಣವಾಗಿಯೇ ನಡೆದು ಕೊಂಡಿದ್ದಾನೆ. ಕೆಲಸಕ್ಕೆ ಆಯ್ಕೆ ಮಾಡುವ ಮುನ್ನವೇ ಇವರನ್ನು ಚೆನ್ನಾಗಿ ಪರೀಕ್ಷೆ ಮಾಡಿ ನೇಮಕ ಮಾಡಿಕೊಳ್ಳಬೇಕು. ಕೆಲಸಕ್ಕೆ ಸೇರಿದ ನಂತರ ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಅಂತವರಿಗೆ ಉಗ್ರ ಶಿಕ್ಷೆ ನೀಡುವುದು. ಒಳ್ಳೆಯ ಕೆಲಸಗಾರರನ್ನು ಗುರ್ತಿಸಿ ಅವರನ್ನು ಗೌರವಿಸಲಾಗುತ್ತಿತ್ತು. ಅವರಿಗೆ ವಾರ್ಷಿಕ ವೇತನ ವನ್ನು ನೀಡುವ ವ್ಯವಸ್ಥೆಯಿತ್ತು. ಇದನ್ನು ಭೃತ್ಯಭರಣೀಯಂ ಎಂದು ಕರೆಯಲಾಗಿತ್ತು. ಈ ರೀತಿ ಸಂಬಳವನ್ನು ಪಡೆಯು ತ್ತಿದ್ದವರಲ್ಲಿ ಮಂತ್ರಿ, ಪುರೋಹಿತ, ಯುವರಾಜ, ರಾಜನ ತಾಯಿ, ರಾಜನ ಗುರು ಮುಂತಾದವರು. 60 ಪಣಗಳಿಂದ ಹಿಡಿದು 48,000 ಪಣಗಳವರೆಗೂ ಇದನ್ನು ನೀಡಲಾಗುತ್ತಿತ್ತು. (ಒಂದು ಪಣಕ್ಕೆ 19 ಆಣೆ). ಇದರ ಜೊತೆಗೆ ಆಹಾರ ಸಾಮಗ್ರಿಗಳು ಹಾಗೂ ಕೆಲವು ಅಧಿಕಾರಿಗಳಿಗೆ ಭೂಮಿಯನ್ನು ಸಹಾ ನೀಡಲಾಗುತ್ತಿತ್ತು.

ಒಟ್ಟಾರೆ ಇವನ ಕಾಲದ ಸಾಮಾಜಿಕ ಜೀವನ ಸಹಜ ವಾಗಿಯೂ, ಸಂತೃಪ್ತವಾಗಿಯೂ, ಶಾಂತಿಯುತವಾಗಿಯೂ, ಸುವ್ಯವಸ್ಥಿತವಾಗಿಯೂ, ಶಿಸ್ತಿನಿಂದಲೂ ಇತ್ತೆಂದು ಭಾವಿಸಿದರೆ ಅದು ತಪ್ಪಾಗಲಾರದು. ಇವೆಲ್ಲಾ ಆ ದಿನದ ಸಮಾಜದಲ್ಲಿ ಸಾಧ್ಯವಿತ್ತು. ಕಾರಣ ಜನರು ಮುಗ್ಧರು ಹಾಗೂ ಜನಸಂಖ್ಯೆ ಕಡಿಮೆಯಿತ್ತು.

ನ್ಯಾಯ ನಿರ್ಣಯ

ನ್ಯಾಯ ಮತ್ತು ಧರ್ಮ ಪರಿಪಾಲನೆ ರಾಜ್ಯಾಡಳಿತದಲ್ಲಿ ಪ್ರಮುಖವಾದುದು. ದೇಶದಲ್ಲಿ ಶಾಂತಿ, ನೀತಿ, ನ್ಯಾಯಾಲಯಗಳನ್ನು ಸ್ಥಿರಗೊಳಿಸಬೇಕಾದರೆ ಅಲ್ಲಿರುವ ದುಷ್ಟ ಶಕ್ತಿಗಳ ದಮನವಾಗಬೇಕು. ಇಲ್ಲಿ ದುಷ್ಟ ಅಥವಾ ಕೆಟ್ಟದು ಯಾವುದು ಎಂದು ವಿಚಾರಮಾಡಿ ನಿರ್ಣಯಿಸಬೇಕಿತ್ತು. ಇದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಸಂಗ್ರಹಣ, ದ್ರೋಣಮುಖ, ಪಂಚಾಯಿತಿ ಮುಂತಾದುವುಗಳ ಮೂಲಕ ನ್ಯಾಯನ್ಯಾಯಗಳ ವಿಮರ್ಶೆ ನಡೆಯುತ್ತಿತ್ತು. ಸಾಲ, ವಚನಭಂಗ, ಹೊಡೆದಾಟ, ಕಾದಾಟ ಕೊಲೆ ಇವುಗಳ ಬಗೆಗೆ ವಿಚಾರ ಮಾಡಿ ನ್ಯಾಯ ನೀಡುವ ಜವಾಬ್ದಾರಿ 'ಧರ್ಮಸ್ಥೀಯ' ಎಂಬ ನ್ಯಾಯಾಲಯಗಳ ಚೌಕಟ್ಟಿಗೆ ಸೇರಿದ್ದು ಅಧಿಕಾರಿಗಳ ಅಪರಾಧ ದ್ರೋಹ, ಕಳವು, ಉಪಾನಿತ• ಮೊದಲಾದ ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಹೊಣೆಗಾರಿಕೆ ಕಂಟಕ ಶೋಧನ ಸಭೆಗಳಿಗೆ ಸೇರಿದ್ದವು. ಇನ್ನು ವಿವಿಧ ರೀತಿಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ, ದಂಡ, ಕಾರಗೃಹವಾಸ, ದೇಹದಂಡನೆ ಬೆತ್ತದಿಂದ ಹೊಡೆತ ಮಲಗಿಸಿ ಮೂಗಿನಲ್ಲಿ ಉಪ್ಪುನೀರು ಬಿಡುವುದು, ಬೆಂಕಿಯಲ್ಲಿ ಹಾಕುವುದು, ಚಳಿಯಲ್ಲಿ ಮಲಗಿಸುವುದು, ಶೂಲಕ್ಕೇರಿಸುವುದು, ಕಾದ ನೀರಿನಲ್ಲಿ ಮುಳುಗಿಸುವುದು, ನಾಲಿಗೆ ಕೊಯ್ಯುವುದು ಮುಂತಾದ ಶಿಕ್ಷೆಗಳ ಮೂಲಕ ಖಳರನ್ನು ದಂಡಿಸಬೇಕು.

ನ್ಯಾಯಾಧೀಶರು, ಅಮಾತ್ಯರು ತಪ್ಪುಗಳನ್ನು ಸರಿಯಾಗಿ ಪರಿಶೀಲಿಸಿ ನಿರಪೇಕ್ಷೆಯಿಂದಲೂ, ನಿಷ್ಠೆಯಿಂದಲೂ, ನಿಷ್ಪಕ್ಷಪಾತದಿಂದಲೂ ನಿರ್ವಂಚನೆಯಿಂದಲೂ ಕಾರ್ಯನಿರ್ವಹಿಸಬೇಕಿದ್ದು, ಭ್ರಷ್ಟಾಚಾರಿಗಳೂ ಲಂಚಬಡುಕರೂ ಆದ ಧರ್ಮಸ್ಥರು ಅಧ್ಯಕ್ಷರ, ನೀತಿವಂತ ಹಳ್ಳಿಗರ ಮತ್ತು ಇತರರ ಕಾಟ ತಪ್ಪಿಸುವುದಕ್ಕಾಗಿ ಗೂಡಚಾರರುಗಳಿದ್ದು. ಅವರು ವೇಷ ಬದಲಿಸಿಕೊಂಡು ಅಧಿಕಾರಿಗಳಿಗೆ ಆಸೆ-ಆಮಿಷಗಳೊಡ್ಡಿ ಅವರನ್ನು ಬಹಳವಾಗಿ ಪತ್ತೆಹಚ್ಚಿ, ಅಂತಹವರನ್ನು ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಆದ ಕಾರಣ ಈ ಲಂಚವೆಂಬುದು ಅಷ್ಟೊಂದು ಹರಡಿರಲಿಲ್ಲ.

ಈ ರೀತಿಯಿರುವ ವ್ಯಕ್ತಿಗಳನ್ನು ಹೇಗೆ ಗುರುತಿಸಬೇಕೆಂಬ ವಿಚಾರವನ್ನು ಕೌಟಿಲ್ಯನ ಗ್ರಂಥದಲ್ಲಿ ಸೂಚಿಸಲಾಗಿದೆ. ಧರ್ಮಸ್ಥ ಲಂಚಕೋರನೆಂದು ಸಂಶಯವಾದರೆ ಅವನಲ್ಲಿಗೆ ಸತ್ರಿ ಗೂಢಚಾರ (ಅಂತರಂಗದ ನಿಷ್ಠಾವಂತ ಗೂಡಚಾರ) ಹೋಗಿ ಮತ್ತೊಬ್ಬನ ಪರಿಚಯವನ್ನು ಅವನಿಗೆ ಮಾಡಿಕೊಟ್ಟು, ಇವನು ನನ್ನ ಪ್ರಾಣ ಸ್ನೇಹಿತ ಇವನ ಮೇಲೆ ಫಿರ್ಯಾದಿಯಾಗಿದೆ. ಆದ್ದರಿಂದ ಈ ಹಣವನ್ನು ಸ್ವೀಕರಿಸಿದರೆ ಆತನನ್ನು ಲಂಚಬಡುಕನೆಂದು ಘೋಷಿಸಿ ನಿರ್ದಾಕ್ಷಿಣ್ಯವಾಗಿ ದೇಶ ಭ್ರಷ್ಟನನ್ನಾಗಿ ಮಾಡಬೇಕೆಂದಿದ್ದಾನೆ.

ಗೂಢಚಾರರು ಗೋಪಾಲಕನ ವೇಷಧರಿಸಿ ಕಳ್ಳಕಾಕರು, ಪುಂಡ ಪೋಕರಿಗಳನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಯಾಗುವಂತೆ ಮಾಡಬೇಕಾಗಿದ್ದಿತು. ಹಾಗೂ ಅವರ ಜೊತೆಯಲ್ಲಿಯೇ ಸೇರಿಕೊಂಡು ಅವರನ್ನು ನಿರ್ನಾಮ ಮಾಡಬೇಕೆಂದಿದ್ದಾನೆ. ಯಾವುದೇ ಒಂದು ಊರಿನಲ್ಲಿ ಸಂಶಯಿತ ವ್ಯಕ್ತಿಗಳಿದ್ದರೆ ಅವರನ್ನು ಪತ್ತೆ

ಹೆಚ್ಚಿ ಅಪರಾಧಕ್ಕೆ ತಕ್ಕಂತೆ ಶಿಕ್ಷೆ ವಿಧಿಸಬೇಕೆಂದು ಕೌಟಿಲ್ಯನು ಹೇಳಿದ್ದಾನೆ. ಈ ವಿಷಯದಲ್ಲಿ ಅವನು ಬಹಳ ಕಠಿಣವಾಗಿ ನಡೆದುಕೊಂಡಿರುವ ಹಾಗೆ ಕಾಣುತ್ತದೆ. ಆದರೆ ಗರ್ಭಿಣಿಯರಿಗೂ ಬಾಣಂತಿಯರಿಗೂ, ದುರ್ಬಲರಿಗೂ, ವೃದ್ಧರಿಗೂ ಇಂಥ ಶಿಕ್ಷೆಗಳನ್ನು ವಿಧಿಸುವ ಹಾಗಿರಲಿಲ್ಲ. ಹಾಗೂ ಬ್ರಾಹ್ಮಣರಿಗೂ ವೇದಾಂತಿಗಳಿಗೂ ದೇಹ ದಂಡನೆಯು ಶಿಕ್ಷೆಯಿರಲಿಲ್ಲ, ಅದಕ್ಕೆ ಬದಲಾಗಿ ಅವರ ಮುಖದ ಮೇಲೆ ಬರೆಹಾಕಿ ದೇಶ ಭ್ರಷ್ಟರನ್ನಾಗಿ ಮಾಡುವುದು ವಾಡಿಕೆಯಲ್ಲಿತ್ತು. ವ್ಯವಹಾರ ಹಾಗೂ ಭೂಮಿಗೆ ಸಂಬಂಧಪಟ್ಟ ಹಾಗೆ ಆ ಖಟ್ಲೆಗಳು ಬಹಿರಂಗವಾಗಿ ವಿಚಾರಣೆಯಾಗಬೇಕೆಂದು ಕೌಟಿಲ್ಯನು ಸ್ಪಷ್ಟಪಡಿಸಿದ್ದಾನೆ.

ಕಂಟಕ ಶೋಧನ

ಕಂಟಕ ಶೋಧನ ಎಂದರೆ ಸಮಾಜಕ್ಕೂ, ರಾಷ್ಟ್ರಕ್ಕೂ ಕಂಟಕರಾದ ವ್ಯಕ್ತಿಗಳನ್ನು ಗುರುತಿಸಿ ಹತ್ತಿಕ್ಕುವುದು. ಅಮಾತ್ಯ ಗುಣಯುಕ್ತರಾದ ಪ್ರದೇಷ್ಟಾರರುಗಳು (ಅಷ್ಟದಶತೀರ್ಥರುಗಳಲ್ಲಿ ತೀಕ್ಷ್ಣಮತಿಗಳಾದವರು) ಸಮಾಜಘಾತಕರನ್ನು ರಾಷ್ಟ್ರದ್ರೋಹಿಗಳನ್ನು ಹತ್ತಿಕ್ಕಬೇಕು. ಇವರುಗಳೆಂದರೆ ಸಮಾಜವನ್ನು ತಪ್ಪುದಾರಿಗೆಳೆವರು. ಶಾಂತಿ, ನೆಮ್ಮದಿ, ಸಂಪ್ರದಾಯಗಳಿಗೆ ಭಂಗತರುವವರೆಂತಲೂ ತೀರ್ಮಾನ ಮಾಡಿ ಅವರನ್ನು ನಿಗ್ರಹಿಸಬೇಕು, ಅದರ ಜೊತೆಗೆ ಕಳವು ಮಾಡಿದ ಮಾಲುಗಳನ್ನು ಮಾರುವವರನ್ನು ಕೊಳ್ಳುವವರನ್ನು ಒತ್ತೆ ಇಟ್ಟುಕೊಂಡವರನ್ನು ಶೋಧಿಸಿ ಕಂಡುಹಿಡಿಯಬೇಕು.

ಅನೇಕ ಪ್ರತ್ಯಕ್ಷ ಪರೋಕ್ಷ ಸಾಕ್ಷ್ಯಾಧಾರಗಳ ಮೂಲಕ ಕಳ್ಳನನ್ನು ಕಂಡುಹಿಡಿದು ಅವನಿಗೆ ಶಿಕ್ಷೆ ವಿಧಿಸಿ ಊರಿನವರಿಗೆಲ್ಲಾ

ಇವನ ಅಪರಾಧವನ್ನು ಇವನಿಗೆ ನೀಡಿದ ಶಿಕ್ಷೆಯನ್ನು ಪ್ರಚಾರ ಮಾಡಬೇಕು, ಆಗ ಇಂತಹ ಅಪರಾಧಗಳನ್ನು ಮಾಡಲು ಯಾರೂ ಇಷ್ಟ ಪಡುತ್ತಿರಲಿಲ್ಲ.

ಶವ ಪರೀಕ್ಷೆಯನ್ನು ಹೇಗೆ ಮಾಡಬೇಕೆಂಬ ವಿಚಾರವನ್ನು ಸಹಾ ಈತ ವಿಚಾರ ಮಾಡಿರುವುದು ಕಂಡುಬರುತ್ತದೆ. ಕೊಲೆಯನ್ನು ಪತ್ತೆ ಹಚ್ಚಬೇಕಾದರೆ ಆಕಸ್ಮಿಕವಾಗಿ ಸತ್ತವನ ಶರೀರವನ್ನು ಎಣ್ಣೆಯಿಂದ ಲೇಪಿಸಿ ಮಲಮೂತ್ರ ಹೊರಬಿದ್ದಿದ್ದರೆ, ಹೊಟ್ಟೆ ಮತ್ತು ಚರ್ಮಗಳಲ್ಲಿ ಗಾಳಿ ತುಂಬಿದ್ದರೆ, ಕೈಕಾಲು ಬಾತಿದ್ದರೆ, ಕಣ್ಣು ತೆರೆದಿದ್ದರೆ ಕುತ್ತಿಗೆ ಹಿಚುಕಿ ಉಸಿರು ಕಟ್ಟಿಸಿ ಕೊಂದಿರುವರೆಂದು, ಕೈಕಾಲು ಹೊಟ್ಟೆ ಬಾತಿದ್ದರೆ, ಕಣ್ಣು ಒಳಸೇರಿ ಹೊಕ್ಕಳ ಮುಂದೆ ಹಾಯ್ದಿದ್ದರೆ ಶೂಲಕ್ಕೇರಿಸಿ ಕೊಂದಿರುವರೆಂದು. ಕೈಕಾಲು, ಹಲ್ಲು, ಉಗುರುಗಳು ಕಪ್ಪಾಗಿ ಕೂದಲು ಮತ್ತು ತೊಗಲು ಸಡಿಲವಾಗಿ ಬಾಯಿಗೆ ಬುರುಗು ಬಂದಿದ್ದರೆ ವಿಷ ಪ್ರಯೋಗದಿಂದ ಈತ ಸತ್ತಿರುವನೆಂದು ತೀರ್ಮಾನಿಸಿ ಕೊಳ್ಳಬೇಕಾಗಿತ್ತು. ಈ ರೀತಿ ಅನೇಕ ರೀತಿಯಲ್ಲಿ ಕಂಟಕ ಶೋಧನೆಯ ಕೆಲಸವನ್ನು ಕೈಗೊಳ್ಳಬೇಕೆಂದಿದ್ದಾನೆ.

ಯಾವುದೇ ಒಂದು ಸಮಾಜದ ಏಳಿಗೆ, ಅಭಿವೃದ್ಧಿ ಅಥವಾ ನೆಮ್ಮದಿಯಿಂದ ಶಾಂತಿಯುತವಾಗಿ ಇರಬೇಕಾದರೆ ಸರ್ಕಾರದ ಭಯವಿರಬೇಕು. ಇದು ಇಲ್ಲದೆ ಹೋದರೆ ಸಮಾಜ ದ್ರೋಹಿಗಳು ಜಾಸ್ತಿಯಾಗಿ ಸಮಾಜದ ಅಸ್ತಿತ್ವಕ್ಕೆ ಕುಂದು ಉಂಟಾಗುತ್ತದೆ. ಅದರಲ್ಲಿಯೂ ಕೌಟಿಲ್ಯನು ನೀಡಿರುವ ಸಲಹೆಗಳನ್ನು ಅನುಸರಿಸಿದರೆ ಸಾಮಾಜಿಕ ಅವ್ಯವಸ್ಥೆ ಉದ್ಭವಿಸುವುದೇ ಇಲ್ಲ ಎಂಬುದು ನಗ್ನ ಸತ್ಯವು, ವಾಸ್ತವಿಕವು ಆಗಿದೆ.

ಉಪಸಂಹಾರ

ಭವ್ಯ ಪರಂಪರೆಯ ಪ್ರಾಚೀನ ಪ್ರಬುದ್ಧ ಮಾನ ಪ್ರೌಢ ಗ್ರಂಥವೆನಿಸಿದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜನೀತಿಯು ಬೇರೆ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿರುವುದಕ್ಕಿಂತ ರಸವತ್ತಾಗಿ, ಬಹುವಿಸ್ತಾರವಾಗಿ, ಬಹು ಆಕರ್ಷಣೀಯವಾಗಿ, ಆದರ್ಶವಾಗಿ, ಹರಿದು ಬಂದಿದೆ. ಇಲ್ಲಿ ರಾಜನೀತಿಗೂ ಧರ್ಮಕ್ಕೂ ನಿಕಟವಾದ ಸಂಬಂಧವನ್ನು ಕಲ್ಪಿಸುವುದು ಮಾತ್ರವಲ್ಲದೆ ನೈಜವಾಗಿ ಅನುಷ್ಠಾನದಲ್ಲಿಡುವ ಪ್ರಯತ್ನ ನಡೆದಿದೆ. ಅದರ ಜೊತೆಗೆ ಇದರ ಮೂಲಕ ಸಮಾಜೀಕರಣ, ಆರ್ಥಿಕ ಕ್ಷೇತ್ರದ ಅಭಿವೃದ್ಧಿ, ರಾಜಕೀಯ ಸಮಾಜದ ಪರಿವರ್ತನೆ, ಆಡಳಿತ ರಂಗದ ಆದರ್ಶತೆ, ಧಾರ್ಮಿಕ ಪರಂಪರೆಯ ಉಳಿಯುವಿಕೆ, ಪಳಿಯುವಿಕೆ, ದೇಶ ಪ್ರೇಮದ ಅಂಕುರ, ಮಾತೃ ಭಾಷೆಯ, ಮಾತೃನಾಡಿನ. ಜ್ಞಾನ, ಶ್ರದ್ಧೆ, ಪ್ರಮಾಣಿಕತೆಯ, ಹಾಗೂ ಸಾಂಸ್ಕೃತಿಕ, ನಾಗರೀಕ, ನೈತಿಕ, ಶೈಕ್ಷಣಿಕ, ಬೌದ್ಧಿಕ, ಅಧ್ಯಾತ್ಮಿಕ, ಅದರಲ್ಲಿಯೂ ಹೆಚ್ಚಾಗಿ ಲೌಕಿಕ ವ್ಯವಹಾರದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಪ್ರತಿಯೊಬ್ಬನಲ್ಲಿಯೂ ಮೂಡಿಸುವಂತಹದ್ದು. ಅದರ ಜೊತೆಗೆ ಕೇವಲ ಆದಿನಗಳಿಗೆ ಮಾತ್ರ ಮೀಸಲಾಗಿರದೆ ಈ ದಿನದ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವಂತ ಗ್ರಂಥವೇ ಇದು. ಒಟ್ಟಾರೆ ಕೌಟಿಲ್ಯನ ವಿಚಾರ ಯಾವ ಪಾಶ್ಚಿಮಾತ್ಯ ತತ್ವಜ್ಞಾನಿಗಿಂತಲು ಕಡಿಮೆಯಾಗಿಲ್ಲ ಹಾಗೂ ಇವನ ವಿಷಯ, ವಿಚಾರಗಳು ಹಿಂದಿನಿಂದ ಇಂದಿನವರೆವಿಗೂ ಮುಂದೆಯು ಕೂಡ ಮೌಲ್ಯಾಧಾರಿತ ವಾಗಿರುತ್ತವೆ ಎಂಬ ವಿಚಾರ ಗಮನಾರ್ಹವಾದ್ದು. ಹೀಗೆ ಚಾಣಕ್ಯನು ತನ್ನ ವಿಚಾರ ಸರಣಿಯ ಚಾಟಿಯಿಂದ ಎಲ್ಲರೂ ಎಚ್ಚತ್ತು ನಡೆಯುವಂತೆ ಮಾಡಿ ಒಬ್ಬ ಅರ್ಥಶಾಸ್ತ್ರಜ್ಞನಾಗಿ,

ರಾಜಕೀಯ ಪಟುವಾಗಿ, ರಾಜತಂತ್ರ ನಿಪುಣನಾಗಿ, ರಾಜಕೀಯ ಪ್ರಜ್ಞಾವಂತನಾಗಿ, ರಾಜಕೀಯ ನಿಪುಣನೆನ್ನಿಸಿಕೊಂಡು, ಮುತ್ಸದ್ದಿಯಾಗಿ, ಕ್ರಾಂತಿಕಾರರ ಸಾಮಾಜಿಕ ಬದಲಾವಣೆಗೆಗೆ ಅವಕಾಶ ಮಾಡಿಕೊಟ್ಟು ಮಿಂಚಿ ಮರೆಯಾಗಿ ಹೋದನು, ಅವನ ಕೊಡುಗೆ ಆದರ್ಶವಾಗಿ, ಅಮರವಾಗಿ, ಅದ್ವಿತೀಯವಾಗಿ ಉಳಿದಿರುವುದು ನಗ್ನ ಸತ್ಯ.

ಕೌಟಿಲ್ಯ ಎಂದರೆ ಕೇವಲ ಕಪಟಕ್ಕೆ, ಕುಟಿಲತೆಗೆ, ಕುತಂತ್ರಕ್ಕೆ, ಮೋಸಕ್ಕೆ, ಕ್ರೂರತನ, ಮಾಟಮಂತ್ರ, ಎಂಬೆಲ್ಲಾ ಅನಿಷ್ಟ ಮತಗಳುಂಟು. ಆದರೆ ಇವನ ವಿಚಾರಗಳು ಮೆಚ್ಚು ವಂತವು. ಅಂದರೆ ರಾಜ, ರಾಜ್ಯ, ಅವನಗುಣಗಳು. ಆಯ್ಕೆ, ಕರ್ತವ್ಯಗಳು, ರಾಜ್ಯದ ಉದ್ದೇಶ ಮಂತ್ರಿಗಳು, ಸೈನಿಕರು, ಅಧಿಕಾರಿಗಳು, ಸೇವಕರು ಹೇಗಿರಬೇಕು, ಜೊತೆಗೆ ಶತ್ರುದಮನ, ಮಿತ್ರವ್ಯವಹಾರ, ದ್ರವ್ಯಸಂಗ್ರಹ ಭ್ರಷ್ಟಾಚಾರದ ನಿರ್ಮೂಲನ, ಅಪರಾಧ, ದಂಢನೀತಿ. ಮುಂತಾದುವುಗಳ ಬಗೆಗೆ ಕಠೋರ ವೆನಿಸಿದರು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಸ್ಥಾನ ನೀಡಿರುವುದು ಗಣನೀಯವಾಗಿದೆ.

ಪಟ್ಟಣಗಳ ಬೆಳವಣಿಗೆ, ಹಳ್ಳಿಯ ಉದ್ಧಾರ, ದೇಶದ ಪ್ರಗತಿ, ಸರ್ಕಾರದ ವ್ಯವಸ್ಥೆ, ಆಡಳಿತದ ವೈಖರಿ, ಪ್ರಜೆಗಳ ರಕ್ಷಣೆಯ ಬಗ್ಗೆ ಬಹುವಾಗಿ ಚಿಂತಿಸಿದ್ದಾನೆ. ಆದರ ಜೊತೆಗೆ ಈಗ ಸಂವಿಧಾನದಲ್ಲಿ ಉಲ್ಲೇಖಕೊಂಡಿರುವ ಅನೇಕ ವಿಚಾರಗಳು ಇಲ್ಲಿ ನಮೂದಿತವಾಗಿವೆ. ಅಂದರೆ ಬಾಲಕಾರ್ಮಿಕರು, ವೃದ್ಧರು, ಸ್ತ್ರೀಯರು, ಮಾನಸಿಕ ರೋಗಿಗಳಿಗೆ ಶಿಕ್ಷೆನೀಡುವುದು, ಅದರಲ್ಲಿ ದೇಹದಂಡನೆಯನ್ನು ನಿಷಿದ್ಧಗೊಳಿಸಲಾಗಿತ್ತು,

ಇದರ ಜೊತೆಗೆ ಈಗ ಸರ್ಕಾರ ಹಮ್ಮಿಗೊಂಡಿರುವ ಯೋಜನೆಗಳು ಅಂದರೆ ರೋಜಗಾರ್, ವಿಶ್ವ, ಅಕ್ಷರ, ಅಭ್ಯಾಸ, ಆರಾಧನ, ಕ್ಷೀರ ದಂತವು ಆದಿನವು ಸಹ ಬೇರೆ ಹೆಸರುಗಳಿಂದ ಅನುಷ್ಠಾನದಲ್ಲಿದ್ದವು ಎಂಬುದು ಬಹಳ ಗಂಭೀರವಾದ ವಿಚಾರವಾಗಿದೆ. ಪ್ರಜಾಭ್ಯುದಯ, ಪ್ರಜಾ ರಕ್ಷಣೆ, ಪ್ರಜಾಪಾಲನೆ, ಪ್ರಜಾ ಸ್ವಾತಂತ್ರ್ಯ, ಪ್ರಜಾಐಕ್ಯತೆ, ಪ್ರಜಾಕೋಟಿಯ ಕಲ್ಯಾಣ ನೀತಿಯ ತಳಹದಿಯ ಮೇಲೆ ರಾಜ್ಯವನ್ನು ಸ್ಥಾಪನೆ ಮಾಡಿದ್ದಾನೆ. ರಾಷ್ಟ್ರ ಧರ್ಮದ ಆಸರೆಯಲ್ಲಿ ನಡೆಯಬೇಕು, ರಾಜನು ಕಾಲಕ್ಕೆ ಅಂದರೆ ವರ್ತಮಾನ ಕಾಲಕ್ಕೆ ಅನುಗುಣವಾಗಿ ಬದಲಾವಣೆಯಾಗಬೇಕು ಆದರಲ್ಲಿಯೂ ಪ್ರಮುಖವಾಗಿ ರಾಜ, ರಾಜ್ಯದ ಮೂಲಾಂಶಗಳು ಅಥವಾ ಸಪ್ತಾಂಗಗಳು ಆಡಳಿತ ಕ್ರಮ, ಸಾಮಾಜಿಕ ಜೀವನ ವ್ಯವಸ್ಥೆ ಸ್ತ್ರೀಯರ ಸ್ಥಾನಮಾನಗಳು.

ಅಂತರ ರಾಷ್ಟ್ರೀಯ ಸಂಬಂಧ ಎಂದರೆ ನೆರೆಹೊರೆಯ ರಾಜ್ಯಗಳ ಸಂಬಂಧ. ವಿದೇಶಾಂಗ ನೀತಿ, ರಾಯಬಾರತ್ವ, ಮಂಡಲ ಸಿದ್ಧಾಂತ, ಷಾಡ್ಗುಣ್ಯ ಸಿದ್ಧಾಂತ ಇನ್ನು ಅನೇಕ ವಿಚಾರಗಳು ಆ ದಿನದ ಸಮಾಜಕ್ಕೆ ಮಾತ್ರ ಅನ್ವಯಿಸದೆ ಈ ದಿನದ ಸಮಾಜಕ್ಕೆ ರಾಜ್ಯಕ್ಕೆ, ಸರ್ಕಾರಕ್ಕೆ, ಸಂಘ ಸಂಸ್ಥೆಗಳಿಗೆ, ಪ್ರಜೆಗಳಿಗೆ ಹಿತವಾಗುವಂತಹ ವಿಷಯಗಳನ್ನು ಪ್ರಸ್ತಾಪ ಮಾಡಿರುವುದು ಸಮಂಜಸವು, ಸತ್ವಯುಕ್ತವು ಎನಿಸುತ್ತದೆ.

ಆಚಾರ್ಯ ಕೌಟಿಲ್ಯನು ರಾಜನೀತಿಯನ್ನು ಧರ್ಮನೀತಿಗಳೊಂದಿಗೆ ಸಮನ್ವಯಗೊಳಿಸಿ ರಾಜಕೀಯ ವಿಚಾರಗಳು ಸಂಪೂರ್ಣವಾಗಿ ನೀತಿಬದ್ಧವಾಗಿಯೂ, ಧರ್ಮಾಧಾರಿತವಾಗಿಯೂ ಇರಬೇಕು ಎಂಬುದು ಇವನ ಅಭಿಮತವಾಗಿತ್ತು.

ಆದರೆ ಇವನು ಹೇಳಿರುವ ಎಲ್ಲಾ ವಿಚಾರಗಳನ್ನು ಈ ದಿನ ಅಳವಡಿಸಿ ಕೊಳ್ಳುವುದು ಸುಲಭವಲ್ಲ ಅದಕ್ಕೆ ಕಾರಣವೆಂದರೆ ಜನರು ಈ ದಿನ ಬುದ್ಧಿವಂತರಾಗಿದ್ದಾರೆ ಅದರ ಜೊತೆಗೆ ವಿಚಾರಮಾಡುವ ಶಕ್ತಿ, ವೈಜ್ಞಾನಿಕ ಮನೋಭಾವ, ವಿದೇಶಿಯ ನಾಗರೀಕತೆಯ ಪ್ರಭಾವ, ಶೈಕ್ಷಣಿಕ ಮಟ್ಟ, ಆರ್ಥಿಕ ಸುದಾರಣೆ, ರಾಜಕೀಯ ಸ್ಥಿತಿ-ಗತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಆದರು ಸಹಾ ಇವನ ವಿಚಾರಗಳು ಅಪ್ರಸ್ತುತ ಎಂದು ಹೇಳುವುದು ಕಷ್ಟ ಅಂದರೆ ಇವನ ಎಲ್ಲಾ ವಿಚಾರಗಳನ್ನು ಒಪ್ಪಿಕೊಳ್ಳಲಾಗದಿದ್ದರು ಸಹಾ ರಾಜಕೀಯ ಆಡಳಿತ ರಂಗದಲ್ಲಿ ಇವನು ಅಮರತ್ವಕ್ಕೇರಿದ್ದಾನೆ ಎಂಬುದು ಮಾತ್ರವಲ್ಲದೆ ರಾಜ್ಯ ಸಿದ್ಧಾಂತಿಗಳ ಪಂಕ್ತಿಯಲ್ಲಿ ಅಸಾಮಾನ್ಯ ಎನ್ನಿಸಿದ್ದಾನೆ.

ಪ್ರಚಾರೋಪನ್ಯಾಸ ಮಾಲೆಯ ಕೆಲವು ಹೊತ್ತಿಗೆಗಳು

ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶನಗಳು	ಕೆ. ಶೇಷಾದ್ರಿ ಅಯ್ಯಂಗಾರ್
ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
ಅಂತರ್ಜಲ	ಸಿ. ನಾಗಣ್ಣ
ಮಾನವ ನಿರ್ಮಿತ ಧಾತುಗಳು	ಎಸ್. ವೆಂಕಟೇಶಮೂರ್ತಿ
ಕರ್ನಾಟಕ ಅಂತರ್ಜಲ ಸಂಪನ್ಮೂಲಾಭಿವೃದ್ಧಿ	ವೈ. ಲಿಂಗರಾಜು
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೆ ?	ಎನ್. ಕೆ. ನರಸಿಂಹಮೂರ್ತಿ
ಅನುವಂಶೀಯತೆ ಮತ್ತು ವೈವಿಧ್ಯ	ಎಂ. ಎಸ್. ಎಸ್. ರಾವ್
ದ್ಯುತಿ ವಿದ್ಯುತ್ ಪರಿಣಾಮ	ಕೆ. ನಾಗರಾಜನ್
ಮಾನವ ಮತ್ತು ಪಾಚಿಗಳು	ವಿ. ಎಸ್. ಯಲವಿಗಿ
ಕಪ್ಪು ರಂಧ್ರಗಳು	ವಿ. ಟಿ. ಎಸ್. ಶರ್ಮ
ಮಾನಸಿಕ ಒತ್ತಡಕ್ಕೆ ಇಂದಿನ ಯುವಜನರ ಪ್ರತಿಕ್ರಿಯೆ	ಡಾ॥ ಇಂದಿರಾ ಜೈ ಪ್ರಕಾಶ್
ನಮ್ಮ ಇಂದಿನ ಜಗತ್ತು ಎದುರಿಸುತ್ತಿರುವ ಸಮಸ್ಯೆಗಳು	ಡಾ॥ ಬಿ. ಈಶ್ವರಪ್ಪ
ಗ್ರಾಮೀಣ ಅಭಿವೃದ್ಧಿಯಲ್ಲಿ ಬೆಳವಣಿಗೆ ಕೇಂದ್ರಗಳ ಪಾತ್ರ	ಡಾ॥ ಬಿ. ಎಲ್. ಬಂಡಿ
ಭಾರತದಲ್ಲಿ ಗ್ರಾಹಕರ ಚಳುವಳಿ ಸಮಸ್ಯೆಗಳು ಮತ್ತು ನಿರೀಕ್ಷೆಗಳು	ಎಂ. ಸಿದ್ದಾನಂದ
ರೇಷ್ಮೆ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ	ಡಾ॥ ಹೆಚ್. ಬಿ. ಪುಟ್ಟರಾಜು
ಪ್ರಕೃತಿ ಚಿಕಿತ್ಸೆಯಿಂದ ಆರೋಗ್ಯ	ಡಾ॥ ಹೊ. ಶ್ರೀನಿವಾಸಯ್ಯ
ರಂಗಭೂಮಿ ಮತ್ತು ಜನಜಾಗೃತಿ	ಕೆ. ವಿ. ಚಂದ್ರಣ್ಣಗೌಡ
ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ರಾಜಕೀಯ ವಿಚಾರಗಳು	ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್
ಭಾಷೆ : ಕೆಲವು ವಿಚಾರಗಳು	ಜಿ. ಅಬ್ದುಲ್ ಬಷೀರ್